SHIKARAT.COM

1. ವಿಶ್ವ ಡೋಪಿಂಗ್ ವಿರೋಧಿ ಏಜೆನ್ಸಿಗೆ (WADA) ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

(a) ಇದು ಕ್ರೀಡೆಗಳಲ್ಲಿ ಡ್ರಗ್ಸ್ ಬಳಕೆಯ ವಿರುದ್ಧ ಹೋರಾಡುತ್ತದೆ

(b) ಇದು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯೊಂದಿಗೆ ಸಂಲಗ್ನತೆ ಹೊಂದಿದೆ

(c) WADAದ ಪ್ರಧಾನ ಕಛೇರಿಯು ನ್ಯೂಯಾರ್ಕ್‌ನಲ್ಲಿದೆ

ಮೇಲಿನ ಹೇಳಿಕೆಗಳಲ್ಲಿ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

(1) a ಮಾತ್ರ
(2) a ಮತ್ತು b ಮಾತ್ರ
(3) a ಮತ್ತು c ಮಾತ್ರ
(4) a, b ಮತ್ತು c

2. ಭಾರತ ಸರ್ಕಾರದ "ಟಾರ್ಗೆಟ್ ಒಲಿಂಪಿಕ್ ಪೋಡಿಯಂ" ಯೋಜನೆಯಡಿಯ ಪ್ರಮುಖ ಗುಂಪಿನಲ್ಲಿ, ಈ ಕೆಳಗಿನ ಯಾವ ಕ್ರೀಡೆಯು ಸೇರ್ಪಡೆಯಾಗಿರುವುದಿಲ್ಲ?

(1) ಬಿಲ್ಲುಗಾರಿಕೆ
(2) ಅಥ್ಲೆಟಿಕ್ಸ್
(3) ಬ್ಯಾಡ್ಮಿಂಟನ್
(4) ಫುಟ್‌ಬಾಲ್

3. 40W ಇರುವ ಒಂದು ವಿದ್ಯುತ್ ಬಲ್ಬ್‌ನ್ನು ದಿನಕ್ಕೆ 10 ಘಂಟೆಗಳ ಕಾಲ ಉಪಯೋಗಿಸಲಾಗಿದೆ. ಒಂದು ದಿನದಲ್ಲಿ ಆ ವಿದ್ಯುತ್ ಬಲ್ಬ್‌ನಿಂದ ಉಪಯೋಗಿಸಲ್ಪಟ್ಟ ಶಕ್ತಿ ________ ಆಗಿದೆ.

(1) 10 ಯುನಿಟ್‌ಗಳು
(2) 0.4 ಯುನಿಟ್‌ಗಳು
(3) 40 ಯುನಿಟ್‌ಗಳು
(4) 0.1 ಯುನಿಟ್‌ಗಳು

4. ಮಧ್ಯಕಾಲೀನ ಭಾರತದಲ್ಲಿನ ಪಕ್ಷಿಗಳು, ಪ್ರಾಣಿಗಳು, ಹೂಗಳು ಮತ್ತು ಗಿಡಗಳ ಬಗ್ಗೆ ಮಾಹಿತಿ ನೀಡುವ ಕೃತಿ ಯಾವುದು?

(1) ಕಿರಾನ-ಉಸ್-ಸದೀನ್
(2) ನುಹ್ ಸಿಫೀರ್
(3) ವಸ್ತ್-ಉಲ್-ಹಯಾತ್
(4) ತಬಕತ್-ಇ-ನಾಸಿರಿ

BHAGAT SINGH STUDY CIRCLE

5. ಹೊಂದಿಸಿ ಬರೆಯಿರಿ:

| ಪಟ್ಟಿ I (ಗ್ರಂಥ) | ಪಟ್ಟಿ II (ಸಾಹಿತಿಗಳು) |
| --- | --- |
| (a) ಕುಮಾರರಾಮ ಸಾಂಗತ್ಯ | i. ಭೀಮ ಕವಿ |
| (b) ಮಹಾನಾಟಕ ಸುಧಾನಿಧಿ | ii. ಲಕ್ಕಣ್ಣ ದಂಡೇಶ |
| (c) ಬಸವ ಪುರಾಣ | iii. ನಂಜುಂಡ |
| (d) ಶಿವತತ್ತ್ವ ಚಿಂತಾಮಣಿ | iv. ದೇವರಾಯ-II |

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ.

(1) a - ii, b - iii, c - i, d - iv
(2) a - iii, b - iv, c - i, d - ii
(3) a - iv, b - iii, c - ii, d - i
(4) a - iii, b - i, c - iv, d - ii

SPACE FOR ROUGH WORK

6. ಆಕಾಶೀಯ ಶಕ್ತಿಯ ಮೂಲಗಳ ಅಧ್ಯಯನಕ್ಕೆ ಮೀಸಲಾದ ಇಸ್ರೋದ ಮೊದಲ ಉಪಗ್ರಹ ______

(1) ಆದಿತ್ಯ
(2) ಆಸ್ಟ್ರೋಸ್ಯಾಟ್
(3) ಆರ್ಯಭಟ
(4) ಗಗನ್

7. ಇವುಗಳಲ್ಲಿ ತಪ್ಪಾದ ಸಂಯೋಜನೆಯನ್ನು ಗುರುತಿಸಿ.

(a) ಪಿಟ್ಯುಟರಿ ಗ್ರಂಥಿ - ಗ್ರೋಥ್ ಹಾರ್ಮೋನ್, ಫಾಲಿಕಲ್ ಸ್ಟಿಮುಲೇಟಿಂಗ್ ಹಾರ್ಮೋನ್
(b) ಥೈರಾಯಿಡ್ ಗ್ರಂಥಿ - ಥೈರಾಕ್ಸಿನ್, ಕ್ಯಾಲ್ಸಿಟೋನಿನ್
(c) ಮೇದೋಜೀರಕಾಂಗ - ಇನ್ಸುಲಿನ್, ಗ್ಲುಕಾಗಾನ್
(d) ಅಡ್ರಿನಲ್ ಗ್ರಂಥಿ - ಅಲ್ಡೋಸ್ಟಿರೋನ್, ಮೆಲಟೋನಿನ್

ಈ ಮೇಲಿನ ಸಂಯೋಜನೆಗಳಲ್ಲಿ ಸರಿಯಾದ ಉತ್ತರವನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಗುರುತಿಸಿ.

(1) a ಮತ್ತು b ಮಾತ್ರ
(2) b ಮತ್ತು c ಮಾತ್ರ
(3) a, b ಮತ್ತು c ಮಾತ್ರ
(4) d ಮಾತ್ರ

8. NHB - RESIDEX ಕುರಿತು ಸರಿಯಿಲ್ಲದ ಹೇಳಿಕೆಗಳನ್ನು ಗುರುತಿಸಿ.

(a) ಇದನ್ನು ಪ್ರಾರಂಭಿಸಿದ್ದು 2007 ರಲ್ಲಿ ಜಾರಿಗೊಳಿಸಲಾಯಿತು
(b) ಇದು ಭಾರತದ 3ನೇ ಅಧಿಕೃತ ವಸತಿ ಬೆಲೆ ಸೂಚ್ಯಾಂಕ
(c) ಇದು ಭಾರತದ ರಿಜರ್ವ್ ಬ್ಯಾಂಕಿನ ಉಪಕ್ರಮ
(d) ಇದರ ಮೂಲ ವರ್ಷವನ್ನು 2007ನೇ ಇಸವಿಯಿಂದ 2017-18ನೇ ಇಸವಿಗೆ ಬದಲಾಯಿಸಲಾಯಿತು.

ಕೋಡುಗಳು:

(1) a ಮತ್ತು d ಮಾತ್ರ
(2) a ಮತ್ತು b ಮಾತ್ರ
(3) c ಮತ್ತು d ಮಾತ್ರ
(4) b ಮತ್ತು c ಮಾತ್ರ

9. ಈ ಕೆಳಗಿನ ಯೋಜನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ:

(a) ಮುಖ್ಯಮಂತ್ರಿ ಮಾತೃಶ್ರೀ ಯೋಜನೆ
(b) ಮಾತೃಪೂರ್ಣ ಯೋಜನೆ
(c) ಉದ್ಯೋಗಿನಿ ಯೋಜನೆ
(d) ಸಖಿ ಯೋಜನೆ

ಕೋಡುಗಳು:

(1) b, a, c, d
(2) c, a, b, d
(3) d, c, b, a
(4) c, d, b, a

SPACE FOR ROUGH WORK

www.shikarat.com

10. MICR ಅಂದರೆ

(a) 9 ಅಂಕಿಗಳ ಕೋಡ್

(b) ಒಂದು ಬ್ಯಾಂಕ್ ಮತ್ತು ಒಂದು ಶಾಖೆಯನ್ನು ಅನನ್ಯವಾಗಿ ಗುರುತಿಸುತ್ತದೆ.

(c) ಮೊದಲ ಮೂರು ಸಂಖ್ಯೆಗಳು ನಗರದ ಕೋಡನ್ನು ಪ್ರತಿನಿಧಿಸುತ್ತವೆ.

ಕೆಳಗಿನ ಕೋಡುಗಳನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) a ಮತ್ತು b ಮಾತ್ರ
(2) b ಮತ್ತು c ಮಾತ್ರ
(3) a ಮತ್ತು c ಮಾತ್ರ
(4) a, b ಮತ್ತು c

11. 2024 ರಲ್ಲಿ ನಡೆದ 18 ನೇ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

(a) 2019 ರ 17 ನೇ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಮಹಿಳಾ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಇಳಿಮುಖವಾಯಿತ

(b) 2019 ರ 17 ನೇ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಚುನಾಯಿತ ಮಹಿಳಾ ಸಂಸದರ ಸಂಖ್ಯೆಯ ಇಳಿಮುಖವಾಯಿತು

(c) ಮಹಿಳಾ ಸಂಸದರಿಗೆ ಸಂಬಂಧಿಸಿದಂತೆ ವಿಶ್ವ ಶ್ರೇಯಾಂಕದಲ್ಲಿಯೂ ಭಾರತದ ಸ್ಥಾನ ಕುಸಿಯಿತು.

ಈ ಮೇಲಿನವುಗಳಲ್ಲಿ ಯಾವುದು/ವು ಸರಿಯಾದ ಹೇಳಿಕೆ/ಹೇಳಿಕೆಗಳಾಗಿವೆ?

ಕೋಡುಗಳು:

(1) a ಮತ್ತು b ಮಾತ್ರ
(2) b ಮತ್ತು c ಮಾತ್ರ
(3) a ಮತ್ತು c ಮಾತ್ರ
(4) a ಮಾತ್ರ

12. ಭಾರತ ಸಂವಿಧಾನದ ಯಾವ ಭಾಗವು 12 ರಾಜ್ಯಗಳಿಗೆ ಸಂಬಂಧಿಸಿದಂತೆ ವಿಶೇಷ ಪ್ರಾವಧಾನಗಳನ್ನು ಹೊಂದಿದೆ?

(1) ಭಾಗ XX
(2) ಭಾಗ XXI
(3) ಭಾಗ XXII
(4) ಭಾಗ XXV

13. ಈ ಕೆಳಗಿನ ಯಾವ ಸ್ಥಳದಲ್ಲಿ ಕರನಿರಾಕರಣೆ ಚಳುವಳಿ ನಡೆಯಲಿಲ್ಲ ?

(1) ಹಿರೇಕೆರೂರು
(2) ಅಂಕೋಲಾ
(3) ಸಿದ್ದಾಪುರ
(4) ಚಿಕ್ಕೋಡಿ

14. ಭಾರತವು ಇತ್ತೀಚೆಗೆ ವ್ಯಾಪಾರ ಮತ್ತು ಆರ್ಥಿಕ ಸಹಯೋಗ ಒಪ್ಪಂದ (TEPA)ಕ್ಕೆ ಯಾವ ಸಂಸ್ಥೆಯೊಂದಿಗೆ ಸಹಿ ಹಾಕಿದೆ?

(1) ASEAN
(2) EU
(3) EFTA
(4) QUAD

SPACE FOR ROUGH WORK

www.shikarat.com

15. ಹಾಲಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ತಪ್ಪಾದ ಹೇಳಿಕೆಯನ್ನು ಗುರುತಿಸಿ:

(1) ಹಾಲು ಒಂದು ಕಲಿಲ ದ್ರಾವಣವಾಗಿದೆ

(2) ಹಾಲು ಒಂದು ಎಮಲ್ಷನ್‌ಗೆ ಉದಾಹರಣೆಯಾಗಿದೆ

(3) ಹಾಲಿನಲ್ಲಿ ದ್ರವವು ಪ್ರಸರಣ ಹಂತ ಹಾಗೂ ಪ್ರಸರಣ ಮಾಧ್ಯಮವಾಗಿದೆ

(4) ಹಾಲಿನಲ್ಲಿ ದ್ರವವು ಪ್ರಸರಣ ಹಂತ ಮತ್ತು ಘನವು ಪ್ರಸರಣ ಮಾಧ್ಯಮವಾಗಿದೆ

16. ಎತ್ತರದ ಪ್ರದೇಶದಲ್ಲಿ ವಾಸಿಸುವ ಜನರಲ್ಲಿ ಹಾಗೂ ಪರ್ವತಾರೋಹಿಗಳಲ್ಲಿ ದುರ್ಬಲ ದೇಹ ಹಾಗೂ ಸರಿಯಾಗಿ ಯೋಚನೆ ಮಾಡುವ ಸಾಮರ್ಥ್ಯ ಕಡಿಮೆಯಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣ:

(a) ಎತ್ತರ ಪ್ರದೇಶದಲ್ಲಿ ಆಮ್ಲಜನಕದ ಆಂಶಿಕ ಒತ್ತಡವೂ ಭೂಮಿಯ ಮೇಲ್ಮೈಗಿಂತ ಕಡಿಮೆ ಇದೆ

(b) ಜನರ ರಕ್ತದಲ್ಲಿ ಮತ್ತು ಜೀವ ಕಣಗಳಲ್ಲಿ ಆಮ್ಲಜನಕದ ಸಾಂದ್ರತೆ ಕಡಿಮೆ ಇರುತ್ತದೆ

(c) ಜನರ ರಕ್ತದಲ್ಲಿ ಮತ್ತು ಜೀವ ಕಣಗಳಲ್ಲಿ ಆಮ್ಲಜನಕದ ಸಾಂದ್ರತೆ ಹೆಚ್ಚಾಗಿರುತ್ತದೆ

(d) ಎತ್ತರದ ಪ್ರದೇಶದಲ್ಲಿ ಆಮ್ಲಜನಕದ ಆಂಶಿಕ ಒತ್ತಡವೂ ಭೂಮಿಯ ಮೇಲ್ಮೈಗಿಂತ ಹೆಚ್ಚಾಗಿರುತ್ತದೆ

ಸರಿಯಾದ ಆಯ್ಕೆಯನ್ನು ಆರಿಸಿ:

(1) a ಮಾತ್ರ
(2) c ಮಾತ್ರ
(3) a ಮತ್ತು c ಎರಡೂ
(4) b ಮತ್ತು d ಎರಡೂ

17. ಹಣ್ಣುಗಳನ್ನು ಕೃತಕವಾಗಿ ಮಾಗಿಸಲು ಈ ಕೆಳಗಿನ ಯಾವ ಸಾವಯವ ಸಂಯುಕ್ತವನ್ನು ಉಪಯೋಗಿಸಲಾಗುತ್ತದೆ?

(1) ಪಾಲಿಥಿನ್
(2) ಈಥೀನ್
(3) ಪಿ.ವಿ.ಸಿ.
(4) ಸಕ್ಕರೆ

18. ಕೆಳಗಿನ ಹೇಳಿಕೆಗಳನ್ನು ಗಮನಿಸಿ:

(a) ಮಯೋಪಿಯಾವನ್ನು ಸಮೀಪದೃಷ್ಟಿ ಎಂದೂ ಕರೆಯುತ್ತೇವೆ ಮತ್ತು ಇದನ್ನು ಪೀನಮಸೂರದಿಂದ ಸರಿಪಡಿಸಬಹುದು

(b) ಮಯೋಪಿಯಾವನ್ನು ದೂರದೃಷ್ಟಿ ಎಂದೂ ಕರೆಯುತ್ತೇವೆ ಮತ್ತು ಇದನ್ನು ಪೀನಮಸೂರದಿಂದ ಸರಿಪಡಿಸಬಹುದು

(c) ಮಯೋಪಿಯಾವನ್ನು ಸಮೀಪದೃಷ್ಟಿ ಎಂದೂ ಕರೆಯುತ್ತೇವೆ ಮತ್ತು ಇದನ್ನು ನಿಮ್ನ ಮಸೂರದಿಂದ ಸರಿಪಡಿಸಬಹುದು

(d) ಮಯೋಪಿಯಾವನ್ನು ದೂರದೃಷ್ಟಿ ಎಂದೂ ಕರೆಯುತ್ತೇವೆ ಮತ್ತು ಇದನ್ನು ನಿಮ್ನ ಮಸೂರದಿಂದ ಸರಿಪಡಿಸಬಹುದು

ಮೇಲಿನ ಹೇಳಿಕೆಗಳಲ್ಲಿ ಯಾವುವು ಸರಿಯಾಗಿಲ್ಲ ?

(1) a, b ಮತ್ತು c
(2) a, b ಮತ್ತು d
(3) b ಮತ್ತು d
(4) a, b, c ಮತ್ತು d

SPACE FOR ROUGH WORK

www.shikarat.com

19. ಕೆಳಗಿನ ಯಾವ ಜೋಡಿಗಳು ಸರಿಯಾಗಿವೆ?

| ಕ್ರಿಯೆ | ಕಾರಣ |
|---|---|
| (a) ಕಾಮನ ಬಿಲ್ಲು ಉಂಟಾಗುವುದು | ಸೂರ್ಯನ ಬೆಳಕಿನ ವಕ್ರೀಭವನ, ಪ್ರತಿಫಲನ ಮತ್ತು ವರ್ಣ ವಿಭಜನೆ |
| (b) ಆಕಾಶದ ನೀಲಿ ಬಣ್ಣ | ಬೆಳಕಿನ ವರ್ಣ ವಿಭಜನೆ |
| (c) ಶೀಘ್ರ ಸೂರ್ಯೋದಯ ಮತ್ತು ವಿಳಂಬಿತ ಸೂರ್ಯಾಸ್ತ | ಬೆಳಕಿನ ವಕ್ರೀಭವನ |

ಕೋಡುಗಳು:

(1) a ಮತ್ತು b
(2) a ಮತ್ತು c
(3) b ಮತ್ತು c
(4) a, b ಮತ್ತು c

20. ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

ಹೇಳಿಕೆ I: ವೈದ್ಯಕೀಯ ಪಾದರಸ ತಾಪಮಾಪಕವು 35°C ನಿಂದ 42°C ವರೆಗಿನ ತಾಪವನ್ನು ಅಳೆಯುವುದು

ಹೇಳಿಕೆ II: ವೈದ್ಯಕೀಯ ಪಾದರಸ ತಾಪಮಾಪಕವನ್ನು ಮಾನವನ ದೇಹದ ತಾಪಮಾನವನ್ನು ಅಳೆಯಲು ಮಾತ್ರ ಉಪಯೋಗಿಸುತ್ತಾರೆ

ಈ ಕೆಳಗಿನ ಯಾವುದು ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಸರಿಯಾಗಿದೆ?

(1) ಎರಡೂ ಹೇಳಿಕೆಗಳು ಸರಿಯಾಗಿದ್ದು, ಹೇಳಿಕೆ II, ಹೇಳಿಕೆ I ನ್ನು ಸರಿಯಾಗಿ ಸಮರ್ಥಿಸುತ್ತದೆ.
(2) ಎರಡೂ ಹೇಳಿಕೆಗಳು ಸರಿಯಾಗಿದ್ದು, ಹೇಳಿಕೆ II, ಹೇಳಿಕೆ I ರ ಸರಿಯಾದ ಸಮರ್ಥನೆಯಲ್ಲ
(3) ಹೇಳಿಕೆ I ಸರಿಯಾಗಿದ್ದು, ಹೇಳಿಕೆ II ತಪ್ಪಾಗಿದೆ
(4) ಹೇಳಿಕೆ I ತಪ್ಪಾಗಿದ್ದು, ಹೇಳಿಕೆ II ಸರಿಯಾಗಿದೆ

21. ಒಂದು ಚೌಕ ಮತ್ತು ವಜ್ರಾಕೃತಿಯು ಒಂದೇ ಪಾದದ ಮೇಲೆ ನಿಂತರೆ, ಚೌಕ ಮತ್ತು ವಜ್ರಾಕೃತಿಯ ವಿಸ್ತೀರ್ಣಗಳ ಅನುಪಾತ ________

(1) 1 ಕ್ಕಿಂತ ಹೆಚ್ಚು
(2) 1 ಕ್ಕೆ ಸಮ
(3) $\frac{1}{2}$ ಕ್ಕೆ ಸಮ
(4) $\frac{1}{4}$ ಕ್ಕೆ ಸಮ

22. A, B, C, D, E, F, G ಮತ್ತು H ಎಂಬ 8 ವ್ಯಕ್ತಿಗಳು ಪರಸ್ಪರ ವಿರುದ್ಧವಾಗಿ ಎರಡು ಸಾಲುಗಳಲ್ಲಿ ಕುಳಿತಿದ್ದಾರೆ. ಪ್ರತಿ ಸಾಲಿನಲ್ಲಿ ನಾಲ್ಕು ಜನರಿದ್ದಾರೆ. B ಮತ್ತು C ಪರಸ್ಪರ ಅಭಿಮುಖವಾಗಿ ಕುಳಿತಿದ್ದಾರೆ. C ಯು D ಮತ್ತು E ಗಳ ನಡುವೆ ಇದ್ದಾರೆ. H ಎಂಬವರು E ಯ ತಕ್ಷಣದ ಎಡಭಾಗದಲ್ಲಿ ಕುಳಿತಿದ್ದಾರೆ. H ಮತ್ತು F ವ್ಯಕ್ತಿಗಳು ಕರ್ಣೀಯವಾಗಿ ವಿರುದ್ಧವಾಗಿ ಕುಳಿತಿದ್ದಾರೆ. G ಮತ್ತು B ವ್ಯಕ್ತಿಗಳು ಪರಸ್ಪರ ಹತ್ತಿರದಲ್ಲಿಲ್ಲ. A ಯ ಮುಂದೆ ಯಾರಿದ್ದಾರೆ?

(1) E
(2) D
(3) C
(4) B

23. ಒಂದು ತಿಂಗಳಿನ 4 ನೇ ಶನಿವಾರ 22 ನೇ ದಿನವಾದರೆ ಆ ತಿಂಗಳಿನ 13 ನೇ ದಿನ ಯಾವ ವಾರ ಆಗಿರುತ್ತದೆ?


(1) ಮಂಗಳವಾರ
(2) ಬುಧವಾರ
(3) ಗುರುವಾರ
(4) ಶುಕ್ರವಾರ

SPACE FOR ROUGH WORK

G F B A

www.shikarat.com

24. ಕೆಳಗಿನ ಚಿತ್ರದಲ್ಲಿ ಎಷ್ಟು ಚೌಕಗಳಿವೆ?



(1) 14
(2) 16
(3) 22
(4) 12


25. A ಯು B ನ ಸಹೋದರಿ. C ಯು B ಯ ತಾಯಿ. D ಯು C ನ ತಂದೆ, E ಯು D ನ ತಾಯಿ. ಹಾಗಾದರೆ A ಯು D ಗೆ ಹೇಗೆ ಸಂಬಂಧವನ್ನು ಹೊಂದಿದ್ದಾರೆ?

(1) ಅಜ್ಜಿ
(2) ಅಜ್ಜ
(3) ಮಗಳು
(4) ಮೊಮ್ಮಗಳು

26. ಒಬ್ಬ ವಿದ್ಯಾರ್ಥಿಯು 13 ಪ್ರಶ್ನೆಗಳಲ್ಲಿ 10 ಪ್ರಶ್ನೆಗಳನ್ನು ಒಂದು ಪರೀಕ್ಷೆಯಲ್ಲಿ ಉತ್ತರಿಸಬೇಕಾಗುತ್ತದೆ. ಅದರಲ್ಲಿ ಅವನು ಮೊದಲ 5 ಪ್ರಶ್ನೆಗಳಲ್ಲಿ ಕನಿಷ್ಟ 4 ಪ್ರಶ್ನೆಗಳನ್ನು ಆಯ್ಕೆ ಮಾಡಿಕೊಳ್ಳಲೇಬೇಕು. ಹಾಗಾದರೆ ಅವನಿಗೆ ದೊರೆಯುವ ಆಯ್ಕೆಗಳ ಸಂಖ್ಯೆಯು ________

(1) 140
(2) 196
(3) 280
(4) 346

27. ಈ ಕೆಳಗಿನ ಚಿತ್ರದಲ್ಲಿನ ಒಟ್ಟು ತ್ರಿಭುಜಗಳ ಸಂಖ್ಯೆಯು ________



BHAGAT SINGH STUDY CIRCLE

(1) 4
(2) 12
(3) 13
(4) 24

28. ಎರಡು ಅಂಕಿಗಳ ಸಂಖ್ಯೆ ಮತ್ತು ಆ ಸಂಖ್ಯೆಯ ಅಂಕಿಗಳನ್ನು ಪರಸ್ಪರ ಬದಲಾಯಿಸುವ ಮೂಲಕ ಪಡೆದ ಸಂಖ್ಯೆಯ ನಡುವಿನ ವ್ಯತ್ಯಾಸವು 27 ಆಗಿದೆ. ಹಾಗಾದರೆ ಆ ಅಂಕಿಗಳ ನಡುವಿನ ವ್ಯತ್ಯಾಸವೇನು?

(1) 9
(2) 7
(3) 5
(4) 3

SPACE FOR ROUGH WORK

www.shikarat.com

29. ಒಂದು ಚೀಲದಲ್ಲಿ 25 ಪೈಸೆ, 10 ಪೈಸೆ ಮತ್ತು 5 ಪೈಸೆ ನಾಣ್ಯಗಳು 3:4:5 ಅನುಪಾತದಲ್ಲಿರುತ್ತದೆ. ಒಟ್ಟು 70 ರೂಪಾಯಿಗಳಿದ್ದರೆ ಎಷ್ಟು ಹತ್ತು ಪೈಸೆ ನಾಣ್ಯಗಳಿವೆ?

(1) 200
(2) 100
(3) 300
(4) 400

30. ರೋಹಿತ್ ಮುಂಬಯಿಗೆ ತನ್ನ ಪ್ರಯಾಣವನ್ನು ಈ ಕೆಳಗಿನಂತೆ ಯೋಜಿಸಿದನು. ಅವನ ಒಟ್ಟು ದೂರದ $\left(\frac{4}{9}\right)$ ರಷ್ಟು ಮಾರ್ಗವನ್ನು ವಿಮಾನದಲ್ಲಿ ಪ್ರಯಾಣಿಸುತ್ತಾನೆ. ಉಳಿದ $\left(\frac{2}{5}\right)$ ರಷ್ಟು ಮಾರ್ಗವನ್ನು ರೈಲಿನಲ್ಲಿ ಪ್ರಯಾಣಿಸುತ್ತಾನೆ. ಉಳಿದ 400 ಕಿ.ಮೀ ದೂರವನ್ನು ಕಾರಿನಲ್ಲಿ ಪ್ರಯಾಣಿಸುತ್ತಾನೆ. ಹಾಗಾದರೆ ರೋಹಿತ್ ಮುಂಬಯಿಗೆ ಹೋಗಲು ಒಟ್ಟು ಎಷ್ಟು ದೂರವನ್ನು ಪ್ರಯಾಣಿಸಿದನು?

SHIKARAT.COM

(1) 1200 ಕಿ.ಮೀ.
(2) 1400 ಕಿ.ಮೀ.
(3) 1600 ಕಿ.ಮೀ.
(4) 1800 ಕಿ.ಮೀ.

31. ಕೆಳಗಿನ ಯಾವ ಜೋಡಿಗಳು ಸರಿಯಾಗಿವೆ?

| | ಪಟ್ಟಿ – 1 | ಪಟ್ಟಿ – 2 |
|---|---|---|
| (a) | ಚಿನ್ನ | ಆಭರಣಗಳು |
| (b) | ತಾಮ್ರ | ನಾಣ್ಯಗಳ ತಯಾರಿಕಾ ಲೋಹ |
| (c) | ಪಾದರಸ | ಉಷ್ಣಮಾಪಕ |
| (d) | ಇಂಗಾಲ | ವಜ್ರ |
| (e) | ಕಬ್ಬಿಣ | ವಿದ್ಯುತ್ ವಾಹಕ ತಂತಿ |

ಕೋಡುಗಳು:

(1) a, b ಮತ್ತು e ಮಾತ್ರ
(2) a, b ಮತ್ತು c ಮಾತ್ರ
(3) a, b ಮತ್ತು d ಮಾತ್ರ
(4) a, b, c, d ಮತ್ತು e

32. ಈ ಕೆಳಗಿನ ಯಾವ ಸಂಯುಕ್ತ ವಸ್ತುವಿನಲ್ಲಿ /ವಸ್ತುಗಳಲ್ಲಿ ಮೆಗ್ನಿಸಿಯಂ ಧಾತುವು ಇರುತ್ತದೆ?

(a) ಕ್ಲೋರೋಫಿಲ್
(b) ಹೀಮೋಗ್ಲೋಬಿನ್
(c) ವಿಟಮಿನ್ B12
(d) ವಿಟಮಿನ್ C

ಕೋಡುಗಳು:

(1) a ಮಾತ್ರ
(2) a ಮತ್ತು b ಮಾತ್ರ
(3) a, b ಮತ್ತು c ಮಾತ್ರ
(4) a, b, c ಮತ್ತು d

SPACE FOR ROUGH WORK

25 : 10 : 5
×3 ×4 15/25
75 40

33. ಹೆಚ್ಚಿನ ಪ್ರಮಾಣದ ಎಥನಾಲ್ ಸೇವಿಸಿದಾಗ ಇದು ಚಯಾಪಚಯ ಕ್ರಿಯೆಗಳನ್ನು ನಿಧಾನಗೊಳಿಸುತ್ತದೆ ಮತ್ತು ಕೇಂದ್ರ ನರಮಂಡಲ ವ್ಯವಸ್ಥೆಯ ದುರ್ಬಲತೆಗೆ ಕಾರಣವಾಗುತ್ತದೆ. ಇದರ ಫಲಿತಾಂಶವಾಗಿ ———— ಉಂಟಾಗುತ್ತದೆ.

(a) ಹೊಂದಾಣಿಕೆಯ ಕೊರತೆ
(b) ಮಾನಸಿಕ ಗೊಂದಲ
(c) ಉತ್ತಮ ಆರೋಗ್ಯ ಮತ್ತು ಮನಸಿಗೆ ಶಾಂತಿ
(d) ಮಂಪರು
(e) ಸಾಮಾನ್ಯ ಪ್ರತಿಬಂಧಿಸುವಿಕೆ ಕಡಿಮೆಯಾಗುವುದು

ಮೇಲಿನವುಗಳಲ್ಲಿ ಸರಿಯಾದದ್ದನ್ನು ಆಯ್ಕೆ ಮಾಡಿ:

(1) a ಮತ್ತು b ಮಾತ್ರ
(2) a, b ಮತ್ತು c ಮಾತ್ರ
(3) a, b, d ಮತ್ತು e ಮಾತ್ರ
(4) c ಮಾತ್ರ

34. ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

(a) ಚಂಪಕಮ್ ದೊರೈರಾಜನ್ ವರ್ಸಸ್ ಸ್ಟೇಟ್ ಆಫ್ ಮದ್ರಾಸ್ - ಪ್ರಿವೆಂಟೀವ್ ಡಿಟೆನ್‌ಷನ್ ಕೇಸ್
(b) ಗೋಲಕ್ ನಾಥ್ ವರ್ಸಸ್ ಸ್ಟೇಟ್ ಆಫ್ ಪಂಜಾಬ್ - ಹೆಬಿಯಸ್ ಕಾರ್ಪಸ್ ಕೇಸ್
(c) ಕೇಶವಾನಂದ ಭಾರತಿ ವರ್ಸಸ್ ಸ್ಟೇಟ್ ಆಫ್ ಕೇರಳ - ಮೂಲಭೂತ ಹಕ್ಕುಗಳ ಕೇಸ್
(d) ಎಸ್.ಆರ್.ಬೊಮ್ಮಾಯಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ - ಚುನಾವಣಾ ಕೇಸ್

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆಗಳನ್ನು ಆಯ್ಕೆ ಮಾಡಿ:

(1) a ಮತ್ತು b ಮಾತ್ರ
(2) b ಮಾತ್ರ
(3) c ಮಾತ್ರ
(4) a ಮತ್ತು d ಮಾತ್ರ

35. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ

ಹೇಳಿಕೆ (A): ತತ್ವಗಳ ಆಧಾರದ ಮೇಲೆ ವಿಶ್ವವು ಬಂಡವಾಳಶಾಹಿ ಬ್ಲಾಕ್ ಮತ್ತು ಕಮ್ಯೂನಿಸ್ಟ್ ಬ್ಲಾಕ್ ಎಂದು ಎರಡು ಬ್ಲಾಕ್‌ಗಳಾಗಿ ವಿಭಜನೆಯಾಗಿದ್ದು 'ಶೀತಲ ಸಮರ'ಕ್ಕೆ ಕಾರಣವಾಯಿತು.

ಕಾರಣ (R): ಭಾರತವು ಯಾವುದೇ ಬ್ಲಾಕ್ ಅನ್ನು ಸೇರಲು ನಿರಾಕರಿಸಿತು ಮತ್ತು ಅಲಿಪ್ತ ನೀತಿಯನ್ನು ಅನುಸರಿಸಿತು.

ಈ ಕೆಳಗಿನ ಯಾವುದು ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಸರಿಯಾಗಿದೆ

(1) (A) ಮತ್ತು (R) ಎರಡೂ ಸರಿಯಾಗಿವೆ ಮತ್ತು (R) ಎಂಬುದು (A) ಗೆ ಸರಿಯಾದ ವಿವರಣೆಯಾಗಿದೆ
(2) (A) ಮತ್ತು (R) ಎರಡೂ ಸರಿಯಾಗಿವೆ ಆದರೆ (R) ಎಂಬುದು (A) ಗೆ ಸರಿಯಾದ ವಿವರಣೆಯಲ್ಲ
(3) (A) ಸರಿ ಆದರೆ (R) ತಪ್ಪು
(4) (A) ತಪ್ಪು ಆದರೆ (R) ಸರಿ

SPACE FOR ROUGH WORK

www.shikarat.com

36. ಪಟ್ಟಿ I ನ್ನು ಪಟ್ಟಿ II ರ ಜೊತೆ ಹೊಂದಿಸಿ:

| ಪಟ್ಟಿ I (ಪರೀಕ್ಷೆ) | ಪಟ್ಟಿ II (ರೋಗ) |
|---|---|
| (a) ಎಲಿಸಾ | i. ಕೋವಿಡ್ ಪತ್ತೆ ಹಚ್ಚುವಿಕೆ |
| (b) ವೈಡಲ್ ಪರೀಕ್ಷೆ | ii. HIV ಪತ್ತೆ ಹಚ್ಚುವಿಕೆ |
| (c) ಬಯೋಪ್ಸಿ | iii. ಟೈಫಾಯ್ಡ್ |
| (d) ಆರ್‌ಟಿ-ಪಿಸಿಆರ್ ಪರೀಕ್ಷೆ | iv. ಕ್ಯಾನ್ಸರ್ |

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ.

(1) a - i, b - ii, c - iii, d - iv

(2) a - ii, b - i, c - iv, d - iii

(3) a - ii, b - iii, c - iv, d - i

(4) a - iv, b - iii, c - ii, d - i

37. ಕೆಳಗಿನವುಗಳಿಂದ ಸರಿಯಲ್ಲದ ಜೋಡಣೆಗಳನ್ನು ಆಯ್ಕೆ ಮಾಡಿ:

(a) ಪಕ್ಷಿಗಳು – ಅಂಡೋತ್ಪಾದಕ

(b) ಅಕಶೇರುಕಗಳು – ಬೆನ್ನು ಮೂಳೆ ಇರುತ್ತದೆ

(c) ಮಾನವ – ಸಜೀವೋತ್ಪಾದನೆ

(d) ಸಂಧಿಪದಿಗಳು – ಮುಚ್ಚಿದ ರಕ್ತ ಪರಿಚಲನಾ ವ್ಯವಸ್ಥೆ

ಕೋಡುಗಳು:

(1) a ಮತ್ತು c ಮಾತ್ರ (2) a ಮತ್ತು b ಮಾತ್ರ

(3) b ಮತ್ತು c ಮಾತ್ರ (4) b ಮತ್ತು d ಮಾತ್ರ

38. ಕೆಳಗೆ ನೀಡಿರುವ ವಾಕ್ಯಗಳಲ್ಲಿ ಕುಲಾಂತರ ಸಸ್ಯಗಳಿಂದ ಆಗಬಹುದಾದ ಉಪಯೋಗಗಳನ್ನು ಗುರುತಿಸಿ:

(a) ಸಸ್ಯಗಳಲ್ಲಿ ಅಜೈವಿಕ ಒತ್ತಡಗಳನ್ನು ತಡೆದುಕೊಳ್ಳುವ ಸಾಮರ್ಥ್ಯ ವೃದ್ಧಿಸಿದವು

(b) ರಾಸಾಯನಿಕ ಕೀಟನಾಶಕಗಳ ಬಳಕೆಯಲ್ಲಿ ಇಳಿಕೆ

(c) ಸಸ್ಯಗಳಲ್ಲಿ ಖನಿಜಗಳ ಬಳಕೆಯ ಸಾಮರ್ಥ್ಯದಲ್ಲಿ ಇಳಿಕೆ

(d) ಆಹಾರದಲ್ಲಿನ ಪೋಷಕಾಂಶಗಳ ಮೌಲ್ಯದಲ್ಲಿ ಹೆಚ್ಚಳ

(1) a ಮಾತ್ರ (2) b ಮಾತ್ರ

(3) c ಮಾತ್ರ (4) ಎಲ್ಲಾ ನಾಲ್ಕೂ

SPACE FOR ROUGH WORK

www.shikarat.com

39. ಕೆಳಗೆ ನೀಡಿರುವ ತಿನ್ನಬಹುದಾದ ಸಸ್ಯದ ಅಂಗ ಮತ್ತು ಅದರ ಪರಿವರ್ತಿತ ಅಂಗಗಳ ಸರಿಯಾದ ಹೊಂದಿಕೆಯನ್ನು ಗುರುತಿಸಿ:

| ತಿನ್ನಬಹುದಾದ ಸಸ್ಯದ ಅಂಗ | ಪರಿವರ್ತಿತ ಅಂಗ |
|---|---|
| (a) ಶುಂಠಿ | i. ಬೇರು |
| (b) ಸಿಹಿಗೆಣಸು | ii. ಕಾಂಡ |
| (c) ಈರುಳ್ಳಿ ಗೆಡ್ಡೆ | iii. ಹೂವಿನ ಮೊಗ್ಗು |
| (d) ಲವಂಗ | iv. ಎಲೆ |
| (e) ಮಾವಿನ ಹಣ್ಣು | v. ಮೀಸೋಕಾರ್ಪ್ |

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ.

(1) a - ii, b - i, c - iv, d - iii, e - v

(2) a - i, b - ii, c - v, d - iv, e - iii

(3) a – iii, b – iv, c – i, d – v, e – ii

(4) a – v, b – iii, c – ii, d – i, e – iv

40. ಈ ಕೆಳಗಿನವುಗಳಲ್ಲಿ ಯಾವ ಅಣೆಕಟ್ಟುಗಳನ್ನು ದಾಮೋದರ ನದಿ ಕಣಿವೆಯಲ್ಲಿ ನಿರ್ಮಿಸಲಾಗಿದೆ?

(a) ತಿಲೈಯಾ ಅಣೆಕಟ್ಟು

(b) ನಾರಾಜ್ ಅಣೆಕಟ್ಟು

(c) ಮೈಥಾನ್ ಅಣೆಕಟ್ಟು

(d) ಪಾಂಚೆಟ್ ಹಿಲ್ ಅಣೆಕಟ್ಟು

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ.

(1) a, c ಮತ್ತು d

(2) a, d ಮತ್ತು b

(3) a, b, c ಮತ್ತು d

(4) d, c ಮತ್ತು b

41. ಕೆಳಗೆ ನೀಡಿರುವ ಹೇಳಿಕೆಗಳನ್ನು ಓದಿ ಅರ್ಥ ಮಾಡಿಕೊಳ್ಳಿ :

(a) ಭಾರತದ ಮೊದಲ ಹತ್ತಿ ಬಟ್ಟೆ ಕೈಗಾರಿಕೆಯು 1954 ರಲ್ಲಿ ಮುಂಬಯಿಯಲ್ಲಿ ಸ್ಥಾಪನೆಯಾಯಿತು.

(b) ಹೂಗ್ಲಿ ಕೈಗಾರಿಕಾ ವಲಯವು ಭಾರತದ ಅತ್ಯಂತ ಹಳೆಯ ಕೈಗಾರಿಕಾ ವಲಯವಾಗಿದೆ

(c) ಭಾರತ ಮೊದಲ ಯಶಸ್ವಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯು ಪಶ್ಚಿಮ ಬಂಗಾಳದ ಕುಲ್ಟಿಯಲ್ಲಿ 1870 ರಲ್ಲಿ ಸ್ಥಾಪನೆಯಾಯಿತು

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು/ವು ಸರಿಯಾಗಿದೆ/ವೆ?

(1) a ಮಾತ್ರ

(2) b ಮಾತ್ರ

(3) c ಮಾತ್ರ

(4) a, b ಮತ್ತು c

SPACE FOR ROUGH WORK

www.shikarat.com

42. ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

ಹೇಳಿಕೆ I: ಹೈಡ್ರೊಪೊನಿಕ್ಸ್ ಎಂಬುದು ಪೋಷಕಾಂಶ ದ್ರಾವಣದಲ್ಲಿ ಸಸ್ಯಗಳನ್ನು ಬೆಳೆಸುವ ವಿಧಾನವಾಗಿದೆ

ಹೇಳಿಕೆ II: ಹೈಡ್ರೊಪೊನಿಕ್ಸ್‌ನಲ್ಲಿ ಟೊಮ್ಯಾಟೊ ತರಹದ ವಾಣಿಜ್ಯಕ ತರಕಾರಿಗಳನ್ನು ಬೆಳೆಸಲು ಮಣ್ಣು ಮುಕ್ತ ಪರಿಸರವನ್ನು ಯಶಸ್ವಿಯಾಗಿ ಬಳಸಲಾಗುತ್ತದೆ

ಈ ಕೆಳಗಿನ ಯಾವುದು ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಸರಿಯಾಗಿದೆ?

(1) ಹೇಳಿಕೆ I ಮತ್ತು ಹೇಳಿಕೆ II ಗಳೆರಡೂ ಸರಿ

(2) ಹೇಳಿಕೆ I ಮತ್ತು ಹೇಳಿಕೆ II ಗಳೆರಡೂ ಸರಿಯಲ್ಲ

(3) ಹೇಳಿಕೆ I ಸರಿ ಆದರೆ ಹೇಳಿಕೆ II ಸರಿಯಲ್ಲ

(4) ಹೇಳಿಕೆ I ಸರಿಯಲ್ಲ ಆದರೆ ಹೇಳಿಕೆ II ಸರಿ

43. ಒತ್ತಡ ಸ್ಥಿತಿಗೆ ಸ್ಪಂದನೆಯಾಗಿ ಅಥವಾ ತುರ್ತುಸ್ಥಿತಿ ಸನ್ನಿವೇಶದಲ್ಲಿ ಮಾನವನ ದೇಹವು ತಯಾರಿಸುವುದು ———— ಅನ್ನು

(1) ಆಕ್ಸಿಟೋಸಿನ್ ಮತ್ತು ವ್ಯಾಸೊಪ್ರೆಸಿನ್

(2) ಅಡ್ರಿನಾಲಿನ್ ಮತ್ತು ನಾರ್‌ಅಡ್ರಿನಾಲಿನ್

(3) ಇನ್ಸುಲಿನ್ ಮತ್ತು ಗ್ಲುಕಗಾನ್

(4) ಈಸ್ಟ್ರೋಜನ್ ಮತ್ತು ಪ್ರೊಲಾಕ್ಟಿನ್

44. ಈ ಕೆಳಗಿನವುಗಳನ್ನು ಓದಿ:

(a) ಡೊಡೊ

(b) ಪ್ಯಾಸೆಂಜರ್ ಪಿಜನ್

(c) ವಾಟರ್ ಹೆಯಾಸಿಂಥ್

(d) ಲಂಟಾನಾ

(e) ಪಾರ್ಥೇನಿಯಂ

ಇವುಗಳಲ್ಲಿ ಯಾವುದು ಅಳಿದ ಪ್ರಭೇದಗಳಾಗಿವೆ?

(1) a ಮತ್ತು b ಮಾತ್ರ

(2) a ಮತ್ತು c ಮಾತ್ರ

(3) c, d ಮತ್ತು e ಮಾತ್ರ

(4) a, b, c ಮತ್ತು d ಮಾತ್ರ

45. ಈ ಕೆಳಗಿನ ಹೇಳಿಕೆಗಳನ್ನು ಓದಿ:

ಹೇಳಿಕೆ I: 1992 ರಲ್ಲಿ ರಿಯೊ ಡಿ ಜನ್ಯೆರೊದಲ್ಲಿ ಜೀವ ವೈವಿಧ್ಯದ ಸಮಾವೇಶ ಜರುಗಿತು

ಹೇಳಿಕೆ II: 1992 ರ ಭೂಶೃಂಗ ಸಭೆಯ ಉದ್ದೇಶವು ಎಲ್ಲ ದೇಶಗಳು ಜೀವ ವೈವಿಧ್ಯತೆಯನ್ನು ಸಂರಕ್ಷಿಸಲು ತೆಗೆದುಕೊಳ್ಳಬೇಕಾದ ಸೂಕ್ತ ನಿರ್ಧಾರಗಳ ಬಗ್ಗೆ ಇತ್ತು

SHIKARAT.COM

(1) ಹೇಳಿಕೆ I ಮತ್ತು ಹೇಳಿಕೆ II ಗಳೆರಡೂ ಸರಿ

(2) ಹೇಳಿಕೆ I ಮತ್ತು ಹೇಳಿಕೆ II ಗಳೆರಡೂ ಸರಿಯಲ್ಲ

(3) ಹೇಳಿಕೆ I ಸರಿ ಆದರೆ ಹೇಳಿಕೆ II ಸರಿಯಲ್ಲ

(4) ಹೇಳಿಕೆ I ಸರಿಯಲ್ಲ ಆದರೆ ಹೇಳಿಕೆ II ಸರಿ

SPACE FOR ROUGH WORK

www.shikarat.com

46. ಈ ಕೆಳಗಿನ ಹೇಳಿಕೆಗಳನ್ನು ಓದಿ:

ಹೇಳಿಕೆ I: ಮೋಟಾರು ವಾಹನಗಳಿಗೆ ಅಳವಡಿಸಲಾದ ವೇಗವರ್ಧಕ ಪರಿವರ್ತಕಗಳು ವಿಷಕಾರಿ ಅನಿಲಗಳ ಹೊರಸೂಸುವಿಕೆಯನ್ನು ಕಡಿಮೆಗೊಳಿಸುತ್ತವೆ

ಹೇಳಿಕೆ II: ವೇಗವರ್ಧಕ ಪರಿವರ್ತಕಗಳನ್ನು ಅಳವಡಿಸಲಾದ ಮೋಟಾರು ವಾಹನಗಳಲ್ಲಿ ಸೀಸರಹಿತ ಪೆಟ್ರೋಲ್ ಅನ್ನೇ ಉಪಯೋಗಿಸಬೇಕಾಗುತ್ತದೆ

(1) ಹೇಳಿಕೆ I ಮತ್ತು ಹೇಳಿಕೆ II ಗಳೆರಡೂ ಸರಿ

(2) ಹೇಳಿಕೆ I ಮತ್ತು ಹೇಳಿಕೆ II ಗಳೆರಡೂ ಸರಿಯಲ್ಲ

(3) ಹೇಳಿಕೆ I ಸರಿ ಆದರೆ ಹೇಳಿಕೆ II ಸರಿಯಲ್ಲ

(4) ಹೇಳಿಕೆ I ಸರಿಯಲ್ಲ ಆದರೆ ಹೇಳಿಕೆ II ಸರಿ

47. ಇತ್ತೀಚೆಗೆ 'ಕಾವೇರಿ ಮೀಟ್ಸ್ ಗಂಗಾ ಯೋಜನೆ'ಯು ಸುದ್ದಿಯಲ್ಲಿತ್ತು. ಇದು ಯಾವುದಕ್ಕೆ ಸಂಬಂಧಿಸಿದೆ?

(1) ಇದು ಭಾರತ ಸರ್ಕಾರದ ಅಂತರರಾಜ್ಯ ನದಿ ಜೋಡಣಾ ಯೋಜನೆಯಾಗಿದ್ದು 2025 ರಿಂದ ಜಾರಿಗೆ ಬರಲಿದೆ.

(2) ಇದು ಉತ್ತರ ಪ್ರದೇಶದಲ್ಲಿ ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸುವ ಕರ್ನಾಟಕ ಮತ್ತು ಉತ್ತರ ಪ್ರದೇಶ ರಾಜ್ಯಗಳ ಮಧ್ಯದ ಒಪ್ಪಂದವಾಗಿದೆ.

(3) ಇದು 'ಅಮೃತ ಪರಂಪರೆ'ಯಡಿಯಲ್ಲಿ ಸಾಂಸ್ಕೃತಿಕ ಸಚಿವಾಲಯವು ಆಯೋಜಿಸುವ ಸಾಂಸ್ಕೃತಿಕ ಹಬ್ಬವಾಗಿದೆ.

(4) ಇದು ಕರ್ನಾಟಕ ಮತ್ತ ಉತ್ತರ ಪ್ರದೇಶ ರಾಜ್ಯಗಳ ನಡುವಿನ ಒಪ್ಪಂದವಾಗಿದ್ದು ಗಂಗಾ ನದಿಯ ಮಾದರಿಯಲ್ಲಿ ಕಾವೇರಿ ನದಿಯನ್ನು ಸೌಂದರ್ಯೀಕರಣಗೊಳಿಸುವುದಕ್ಕೆ ಸಂಬಂಧಿಸಿದೆ.

48. ಭಾರತೀಯ ಒಳನಾಡು ಜಲಮಾರ್ಗ ಪ್ರಾಧಿಕಾರವು ಈ ಕೆಳಕಂಡ ಯಾವ ಜಲಮಾರ್ಗವನ್ನು ರಾಷ್ಟ್ರೀಯ ಜಲಮಾರ್ಗ ಎಂದು ಗುರುತಿಸಿದೆ?

(1) ಸಟ್ಲೇಜ್ - ಯಮುನಾ ಲಿಂಕ್ ಕಾಲುವೆ

(2) ಬಾರಿ - ದೋಆಬ್ ಕಾಲುವೆ

(3) ಕೊಟ್ಟಪುರಂ - ಕೊಲ್ಲಂ ಕಾಲುವೆ

(4) ಇಂದಿರಾ ಗಾಂಧಿ ಕಾಲುವೆ

49. ಈ ಕೆಳಕಂಡ ಯಾವ ಹೇಳಿಕೆ ಸರಿಯಲ್ಲ ?

(1) ಕಟಬಾಟಿಕ್ ಒಂದು ಪರ್ವತದ ಮಾರುತ

(2) ಅನಬಾಟಿಕ್ ಒಂದು ಕಣಿವೆಯ ಮಾರುತ

(3) ಮಿಸ್ಟ್ರಾಲ್ ಒಂದು ಬೆಚ್ಚಗಿನ ಮಾರುತ

(4) ಚಿನೂಕ್ ಒಂದು ಬೆಚ್ಚಗಿನ ಮಾರುತ

SPACE FOR ROUGH WORK

www.shikarat.com

50. ACE (ಆಕ್ಷನ್ ಫಾರ್ ಕ್ಲೈಮೇಟ್ ಎಂಪವರ್‌ಮೆಂಟ್) ಪರಿಕಲ್ಪನೆಯನ್ನು UNFCCCಯು ಸಮಾಜದ ಸದಸ್ಯರನ್ನು ತಾಪಮಾನ ಕ್ರಿಯೆಯಲ್ಲಿ ACEನ ಆರು ಘಟಕಗಳ (ಎಲಿಮೆಂಟ್ಸ್) ಮೂಲಕ ಸಬಲೀಕರಣಗೊಳಿಸಲು ಅಳವಡಿಸಿಕೊಳ್ಳಲಾಗಿದೆ. ಈ ಕೆಳಗಿನವುಗಳಲ್ಲಿ ಯಾವುದು/ಯಾವುವು ACE ಘಟಕಗಳಾಗಿದೆ/ಘಟಕಗಳಾಗಿವೆ?

(a) ಅಂತರಾಷ್ಟ್ರೀಯ ಸಹಕಾರ
(b) ತರಬೇತಿ
(c) ಶಿಕ್ಷಣ
(d) ಸಾರ್ವಜನಿಕರಿಗೆ ಮಾಹಿತಿಯ ಲಭ್ಯತೆ

ಈ ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ:

(1) a ಮಾತ್ರ ಸರಿ
(2) b ಮಾತ್ರ ಸರಿ
(3) c ಮಾತ್ರ ಸರಿ
(4) ಮೇಲಿನ ಎಲ್ಲವೂ ಸರಿ

51. ಕೆಳಕಂಡ ಜನಾಂಗಗಳು ಮತ್ತು ಖಂಡಗಳನ್ನು ಹೊಂದಿಸಿರಿ:

| ಜನಾಂಗಗಳು | ಖಂಡಗಳು |
|---|---|
| (a) ಆಸ್ಟ್ರಲಾಯಿಡ್ | i. ಏಷ್ಯಾ |
| (b) ನೀಗ್ರೋಯಿಡ್ | ii. ಆಸ್ಟ್ರೇಲಿಯ |
| (c) ಮಂಗೋಲಾಯಿಡ್ | iii. ಯುರೋಪ್ |
| (d) ಕೊಕಸಾಯ್ಡ್ | iv. ಆಫ್ರಿಕಾ |

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ.

(1) a - ii, b - iv, c - i, d - iii
(2) a - i, b - ii, c - iii, d - iv
(3) a - iii, b - i, c - ii, d - iv
(4) a - iv, b - ii, c - iii, d - i

52. ಈ ಕೆಳಗಿನ ಹೇಳಿಕೆಗಳನ್ನು ಓದಿ:

ಹೇಳಿಕೆ I: ಅಮೆರಿಕಾ ಮತ್ತು ಮೆಕ್ಸಿಕೊ ನಡುವೆ ಇರುವ ರಿಯೊ ಗ್ರಾಂಡೆ ನೈಸರ್ಗಿಕ ಗಡಿಗೆ ಉದಾಹರಣೆಯಾಗಿದೆ
ಹೇಳಿಕೆ II: ರ್‍ಯಾಡ್‌ಕ್ಲಿಫ್ ರೇಖೆ ಅತಿಕ್ರಮವಾಗಿ ಹೇರಲಾದ ಗಡಿಗೆ ಉದಾಹರಣೆಯಾಗಿದೆ

ಸರಿಯಾದ ಹೇಳಿಕೆಯನ್ನು/ಹೇಳಿಕೆಗಳನ್ನು ಆಯ್ಕೆ ಮಾಡಿ:

(1) ಹೇಳಿಕೆ I ಮಾತ್ರ
(2) ಹೇಳಿಕೆ II ಮಾತ್ರ
(3) ಹೇಳಿಕೆ I ಮತ್ತು ಹೇಳಿಕೆ II
(4) ಹೇಳಿಕೆಗಳು ಸರಿಯಿಲ್ಲ

53. ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ:

(a) ಬೆಳಗಾವಿ ಮತ್ತು ನೆಲ್ಲೂರು ಸುವರ್ಣ ಚತುಷ್ಕೋನ ಹೆದ್ದಾರಿ ವ್ಯಾಪ್ತಿಯಲ್ಲಿದೆ
(b) ವಡೋದರಾ ಮತ್ತು ಝಾನ್ಸಿ ಪೂರ್ವ-ಪಶ್ಚಿಮ ಕಾರಿಡಾರ್ ವ್ಯಾಪ್ತಿಗೆ ಒಳಪಟ್ಟಿದೆ
(c) ಅಂಬಾಲಾ ಮತ್ತು ಕಾನ್ಪುರ ಉತ್ತರ-ದಕ್ಷಿಣ ಕಾರಿಡಾರ್ ವ್ಯಾಪ್ತಿಗೆ ಒಳಪಟ್ಟಿದೆ

ಈ ಕೆಳಕಂಡ ಯಾವುದು/ಯಾವುವು ಸರಿಯಾಗಿದೆ/ಸರಿಯಾಗಿವೆ?

(1) a, b ಮತ್ತು c ಸರಿಯಾಗಿವೆ
(2) b ಮತ್ತು c ಸರಿಯಾಗಿವೆ
(3) a ಮತ್ತು b ಸರಿಯಾಗಿವೆ
(4) a ಮಾತ್ರ ಸರಿ

SPACE FOR ROUGH WORK

www.shikarat.com

54. ಒಂದು ಸರಕು ಸಾಗಾಟದ ಲಾರಿ ದೆಹಲಿಯಿಂದ ಭೋಪಾಲ್‌ಗೆ ಗ್ವಾಲಿಯಾರ್ ಮಾರ್ಗವಾಗಿ ಸಂಚರಿಸಬೇಕಾಗಿದೆ. ಅತ್ಯಂತ ಕಡಿಮೆ ದೂರದಲ್ಲಿ ಈ ಮಾರ್ಗವನ್ನು ಕ್ರಮಿಸಲು ಈ ಕೆಳಕಂಡ ಯಾವೆಲ್ಲಾ ರಾಷ್ಟ್ರೀಯ ಹೆದ್ದಾರಿಗಳನ್ನು ಬಳಸಿಕೊಂಡು ಸಂಚರಿಸಬೇಕಾಗಿದೆ?

(1) NH2, NH11, NH12
(2) NH2, NH3, NH12
(3) NH8, NH3, NH12
(4) NH3, NH2, NH11

55. ರಾಜಮನೆತನ ಮತ್ತು ಅದರ ಸ್ಥಾಪಕರಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳನ್ನು ಪರಿಗಣಿಸಿರಿ:

(a) ಶುಂಗ ರಾಜಮನೆತನ : ಅಗ್ನಿಮಿತ್ರ ಶುಂಗ
(b) ಕಣ್ವ ರಾಜಮನೆತನ : ವಸುದೇವ ಕಣ್ವ
(c) ಕುಶಾನ ಸಾಮ್ರಾಜ್ಯ : ವಿಮ ಕಡಫಿಸಸ್
(d) ಶಕ ರಾಜಮನೆತನ : ಮೌಯೆಸ್

ಈ ಮೇಲಿನ ಎಷ್ಟು ಜೋಡಿ/ಜೋಡಿಗಳು ಸರಿಯಾಗಿ ಹೊಂದಿಕೆಯಾಗಿದೆ/ಹೊಂದಿಕೆಯಾಗಿವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಮೂರು ಮಾತ್ರ
(4) ಎಲ್ಲಾ ನಾಲ್ಕು

56. ಅಲ್ಲಾವುದ್ದೀನ್ ಖಿಲ್ಜಿಯ ತೆರಿಗೆ ನೀತಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳನ್ನು ಪರಿಗಣಿಸಿರಿ:

(a) ಅಲ್ಲಾವುದ್ದೀನ್ ಖಿಲ್ಜಿ ಗಣಿಗಳ ಮೇಲೆ ಖುಮ್ಸ್ ಎಂಬ ತೆರಿಗೆಯನ್ನು ವಿಧಿಸಿದನು
(b) ಝುಕಾತ್ ಎಂಬುದು ಅವನ ಆಳ್ವಿಕೆಯಲ್ಲಿ ಮುಸ್ಲಿಮೇತರರ ಮೇಲೆ ವಿಧಿಸಲಾದ ತೆರಿಗೆಯಾಗಿತ್ತು
(c) ಜೆಜಿಯಾ ತೆರಿಗೆಯನ್ನು ಜಾನುವಾರಗಳ ಮೇಲೆ ವಿಧಿಸಲಾಗುತ್ತಿತ್ತು

ಈ ಮೇಲಿನ ಎಷ್ಟು ಹೇಳಿಕೆ/ಹೇಳಿಕೆಗಳು ಸರಿಯಾಗಿ ಹೊಂದಿಕೆಯಾಗಿದೆ/ಹೊಂದಿಕೆಯಾಗಿವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಎಲ್ಲಾ ಮೂರು
(4) ಯಾವುದೂ ಇಲ್ಲ

57. ಈ ಕೆಳಗಿನ ಒಪ್ಪಂದಗಳನ್ನು ಪರಿಗಣಿಸಿ :

(a) ಲಕ್ನೋ ಒಪ್ಪಂದ - 1916
(b) ಗಾಂಧಿ - ಇರ್ವಿನ್ ಒಪ್ಪಂದ - 1930
(c) ಪೂನಾ ಒಪ್ಪಂದ - 1933

ಈ ಮೇಲಿನ ಎಷ್ಟು ಒಪ್ಪಂದ/ಒಪ್ಪಂದಗಳು ಸರಿಯಾಗಿ ಹೊಂದಿಕೆಯಾಗಿದೆ/ಹೊಂದಿಕೆಯಾಗಿವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಎಲ್ಲಾ ಮೂರು
(4) ಯಾವುದೂ ಇಲ್ಲ

SPACE FOR ROUGH WORK

www.shikarat.com

58. ವಿದ್ವತ್‌ಪೂರ್ಣ ಸಂಶೋಧನಾ ಲೇಖನಗಳು ಮತ್ತು ಪ್ರಕಟಿತ ಜರ್ನಲ್‌ಗಳನ್ನು ರಾಷ್ಟ್ರಾದ್ಯಂತ ಒದಗಿಸುವ ಗುರಿಯಿರುವ ಯೋಜನೆಗೆ ಕೇಂದ್ರ ಕ್ಯಾಬಿನೇಟ್ ಅನುಮೋದನೆ ನೀಡಿದ್ದು, ಆ ಯೋಜನೆಯನ್ನು ಹೆಸರಿಸಿ.

(1) ಪಿಎಂ ಕೌಶಲ್ ವಿಕಾಸ್ ಸ್ಕೀಮ್

(2) ವರ್ಲ್ಡ್ ಕ್ಲಾಸ್ ಇನ್ಸ್ಟಿಟ್ಯೂಷನ್ಸ್ ಸ್ಕೀಮ್

(3) ಒನ್ ನೇಷನ್ ಒನ್ ಸಬ್‌ಸ್ಕ್ರಿಪ್ಶನ್ ಸ್ಕೀಮ್

(4) ನ್ಯಾಷನಲ್ ಡೇಟಾ ಶೇರಿಂಗ್ ಆ್ಯಂಡ್ ಆ್ಯಕ್ಸೆಸಿಬಿಲಿಟಿ ಸ್ಕೀಮ್

59. ಕೆಳಗಿನ ಕರ್ನಾಟಕದ ಮುಖ್ಯಮಂತ್ರಿಗಳನ್ನು ಆರಂಭದಿಂದ ಕ್ರಮವಾಗಿ ಬರುವಂತೆ ಉತ್ತರವನ್ನು ಆಯ್ಕೆ ಮಾಡಿ.

(a) ಶ್ರೀ ಎಸ್.ಆರ್.ಬೊಮ್ಮಾಯಿ (b) ಶ್ರೀ ಜೆ.ಎಚ್. ಪಟೇಲ್

(c) ಶ್ರೀ ರಾಮಕೃಷ್ಣ ಹೆಗಡೆ (d) ಶ್ರೀ ಬಿ.ಡಿ. ಜತ್ತಿ

ಕೋಡುಗಳು:

(1) b, a, d, c (2) a, b, c, d

(3) c, d, a, b (4) d, c, a, b

BHAGAT SINGH STUDY CIRCLE

60. ಬ್ರಿಕ್ಸ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ತಪ್ಪಾಗಿರುವ ಹೇಳಿಕೆ ಯಾವುದು / ಯಾವುವು?

(a) 16ನೇ ಬ್ರಿಕ್ಸ್ ಶಂಗಸಭೆ ರಷ್ಯಾದಲ್ಲಿ ನಡೆಯಿತು ಮತ್ತು ಭಾರತದಿಂದ ಪ್ರಧಾನಿ ನರೇಂದ್ರ ಮೋದಿಯವರು ಭಾಗವಹಿಸಿದರು

(b) 2006ರಲ್ಲಿ ಬ್ರಿಕ್ ಸ್ಥಾಪಿತವಾಯಿತು ಮತ್ತು ಭಾರತ ಇದರ ಸಂಸ್ಥಾಪಕ ಸದಸ್ಯ ರಾಷ್ಟ್ರವಾಗಿತ್ತು

(c) 16ನೇ ಬ್ರಿಕ್ಸ್ ಶೃಂಗ ಸಭೆ ವೇಳೆ ಒಟ್ಟು 10 ಸದಸ್ಯ ರಾಷ್ಟ್ರಗಳಿದ್ದವು. ದಕ್ಷಿಣ ಆಫ್ರಿಕಾ ಬ್ರಿಕ್‌ಗೆ 05ನೇ ಸದಸ್ಯ ರಾಷ್ಟ್ರವಾಗಿ ಸೇರ್ಪಡೆಗೊಂಡಿತು

(d) ಇರಾನ್, ಈಜಿಪ್ಟ್, ಇಥಿಯೋಪಿಯ, ಮಲೇಷ್ಯಾ ಮತ್ತು ಬ್ರೆಜಿಲ್ ಬ್ರಿಕ್ಸ್ ಸದಸ್ಯ ರಾಷ್ಟ್ರಗಳು

ಕೋಡುಗಳು :

(1) a ಮತ್ತು d ಮಾತ್ರ (2) c ಮಾತ್ರ

(3) b ಮಾತ್ರ (4) d ಮಾತ್ರ

61. ಭಾರತ ಸರ್ಕಾರದ ಯೋಜನೆಯಾದ 'KAPILA' ಅನ್ನು ವಿಸ್ತರಿಸಿರಿ.

(1) ಕಲಾಂ ಪ್ರೊಜೆಕ್ಟ್ ಫಾರ್ ಇಂಟರ್‌ನೆಟ್ ಲಿಟರಸಿ ಆ್ಯಂಡ್ ಅವೇರ್‌ನೆಸ್

(2) ಕಲಾಂ ಪ್ರೋಗ್ರಾಂ ಫಾರ್ ಐಪಿ ಲಿಟರಸಿ ಆ್ಯಂಡ್ ಅವೇರ್‌ನೆಸ್

(3) ಕಣಾದ ಪ್ರೋಗ್ರಾಂ ಫಾರ್ ಇಂಡಿಯನ್ ಲ್ಯಾಂಗ್ವೇಜ್ ಆ್ಯಂಡ್ ಅವೇರ್‌ನೆಸ್

(4) ಕಸ್ತೂರಿರಂಗನ್ ಪ್ರೋಗ್ರಾಂ ಫಾರ್ ಇಸ್ರೋ ಲಿಟರಸಿ ಆ್ಯಂಡ್ ಅವೇರ್‌ನೆಸ್



www.shikarat.com

58. ವಿದ್ವತ್‌ಪೂರ್ಣ ಸಂಶೋಧನಾ ಲೇಖನಗಳು ಮತ್ತು ಪ್ರಕಟಿತ ಜರ್ನಲ್‌ಗಳನ್ನು ರಾಷ್ಟ್ರಾದ್ಯಂತ ಒದಗಿಸುವ ಗುರಿಯಿರುವ ಯೋಜನೆಗೆ ಕೇಂದ್ರ ಕ್ಯಾಬಿನೇಟ್ ಅನುಮೋದನೆ ನೀಡಿದ್ದು, ಆ ಯೋಜನೆಯನ್ನು ಹೆಸರಿಸಿ.

(1) ಪಿಎಂ ಕೌಶಲ್ ವಿಕಾಸ್ ಸ್ಕೀಮ್

(2) ವರ್ಲ್ಡ್ ಕ್ಲಾಸ್ ಇನ್ಸ್ಟಿಟ್ಯೂಷನ್ಸ್ ಸ್ಕೀಮ್

(3) ಒನ್ ನೇಷನ್ ಒನ್ ಸಬ್‌ಸ್ಕ್ರಿಪ್ಶನ್ ಸ್ಕೀಮ್

(4) ನ್ಯಾಷನಲ್ ಡೇಟಾ ಶೇರಿಂಗ್ ಆ್ಯಂಡ್ ಆ್ಯಕ್ಸೆಸಿಬಿಲಿಟಿ ಸ್ಕೀಮ್

59. ಕೆಳಗಿನ ಕರ್ನಾಟಕದ ಮುಖ್ಯಮಂತ್ರಿಗಳನ್ನು ಆರಂಭದಿಂದ ಕ್ರಮವಾಗಿ ಬರುವಂತೆ ಉತ್ತರವನ್ನು ಆಯ್ಕೆ ಮಾಡಿ.

(a) ಶ್ರೀ ಎಸ್.ಆರ್.ಬೊಮ್ಮಾಯಿ

(b) ಶ್ರೀ ಜೆ.ಎಚ್. ಪಟೇಲ್

(c) ಶ್ರೀ ರಾಮಕೃಷ್ಣ ಹೆಗಡೆ

(d) ಶ್ರೀ ಬಿ.ಡಿ. ಜತ್ತಿ

ಕೋಡುಗಳು:

(1) b, a, d, c

(2) a, b, c, d

(3) c, d, a, b

(4) d, c, a, b

60. ಬ್ರಿಕ್ಸ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ತಪ್ಪಾಗಿರುವ ಹೇಳಿಕೆ ಯಾವುದು/ಯಾವುವು?

(a) 16ನೇ ಬ್ರಿಕ್ಸ್ ಶಂಗಸಭೆ ರಷ್ಯಾದಲ್ಲಿ ನಡೆಯಿತು ಮತ್ತು ಭಾರತದಿಂದ ಪ್ರಧಾನಿ ನರೇಂದ್ರ ಮೋದಿಯವರು ಭಾಗವಹಿಸಿದರು

(b) 2006ರಲ್ಲಿ ಬ್ರಿಕ್ ಸ್ಥಾಪಿತವಾಯಿತು ಮತ್ತು ಭಾರತ ಇದರ ಸಂಸ್ಥಾಪಕ ಸದಸ್ಯ ರಾಷ್ಟ್ರವಾಗಿತ್ತು

(c) 16ನೇ ಬ್ರಿಕ್ಸ್ ಶೃಂಗ ಸಭೆ ವೇಳೆ ಒಟ್ಟು 10 ಸದಸ್ಯ ರಾಷ್ಟ್ರಗಳಿದ್ದವು. ದಕ್ಷಿಣ ಆಫ್ರಿಕಾ ಬ್ರಿಕ್‌ಗೆ 05ನೇ ಸದಸ್ಯ ರಾಷ್ಟ್ರವಾಗಿ ಸೇರ್ಪಡೆಗೊಂಡಿತು

(d) ಇರಾನ್, ಈಜಿಪ್ಟ್, ಇಥಿಯೋಪಿಯ, ಮಲೇಷ್ಯಾ ಮತ್ತು ಬ್ರೆಜಿಲ್ ಬ್ರಿಕ್ಸ್ ಸದಸ್ಯ ರಾಷ್ಟ್ರಗಳು

ಕೋಡುಗಳು :

(1) a ಮತ್ತು d ಮಾತ್ರ

(2) c ಮಾತ್ರ

(3) b ಮಾತ್ರ

(4) d ಮಾತ್ರ

61. ಭಾರತ ಸರ್ಕಾರದ ಯೋಜನೆಯಾದ 'KAPILA' ಅನ್ನು ವಿಸ್ತರಿಸಿರಿ.

(1) ಕಲಾಂ ಪ್ರೊಜೆಕ್ಟ್ ಫಾರ್ ಇಂಟರ್‌ನೆಟ್ ಲಿಟರಸಿ ಆ್ಯಂಡ್ ಅವೇರ್‌ನೆಸ್

(2) ಕಲಾಂ ಪ್ರೋಗ್ರಾಂ ಫಾರ್ ಐಪಿ ಲಿಟರಸಿ ಆ್ಯಂಡ್ ಅವೇರ್‌ನೆಸ್

(3) ಕಣಾದ ಪ್ರೋಗ್ರಾಂ ಫಾರ್ ಇಂಡಿಯನ್ ಲ್ಯಾಂಗ್ವೇಜ್ ಆ್ಯಂಡ್ ಅವೇರ್‌ನೆಸ್

(4) ಕಸ್ತೂರಿರಂಗನ್ ಪ್ರೋಗ್ರಾಂ ಫಾರ್ ಇಸ್ರೋ ಲಿಟರಸಿ ಆ್ಯಂಡ್ ಅವೇರ್‌ನೆಸ್

SPACE FOR ROUGH WORK

www.shikarat.com

62. ರಾಷ್ಟ್ರೀಯ ಸ್ಟಾರ್ಟ್-ಅಪ್ ದಿವಸ-2024ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

(a) ರಾಷ್ಟ್ರೀಯ ಸ್ಟಾರ್ಟ್-ಅಪ್ ದಿವಸ-2024ರ ಥೀಮ್ 'ಸ್ಟಾರ್ಟ್‌ಅಪ್ಸ್ ಅನ್‌ಲಾಕಿಂಗ್ ಇನ್‌ಫೈನೇಟ್ ಪೊಟೆನ್ಶಿಯಲ್' ಎಂದಾಗಿತ್ತು

(b) ರಾಷ್ಟ್ರೀಯ ಸ್ಟಾರ್ಟ್-ಅಪ್ ದಿವಸವನ್ನು ಜನವರಿ 31ರಂದು ಆಚರಿಸಲಾಗುತ್ತದೆ

(c) ಪ್ರಧಾನ ಮಂತ್ರಿ ಮೋದಿಯವರು ಜನವರಿ 15, 2022 ರಂದು ರಾಷ್ಟ್ರೀಯ ಸ್ಟಾರ್ಟ್-ಅಪ್ ದಿವಸದ ಸ್ಥಾಪನೆಯ ಕುರಿತು ಘೋಷಿಸಿದರು

ಕೋಡುಗಳು:

(1) a ಮತ್ತು c ಮಾತ್ರ
(2) b ಮಾತ್ರ
(3) b ಮತ್ತು c ಮಾತ್ರ
(4) a, b ಮತ್ತು c

63. 2ನೇ ಡಿಸೆಂಬರ್ 2024 ರಂದು ಮಧ್ಯ ಪ್ರದೇಶ ರಾಜ್ಯ ಸರ್ಕಾರವು ಈ ಕೆಳಗಿನ ಯಾವ ವನ್ಯ ಜೀವಿ ಧಾಮವನ್ನು ಹುಲಿ ಸಂರಕ್ಷಣಾ ವಲಯ ಪ್ರದೇಶ ಎಂದು ಘೋಷಿಸಿ ಪ್ರಕಟಣೆ ಹೊರಡಿಸಿದೆ?

(1) ರಳಮಂಡಲ್ ವನ್ಯಜೀವಿ ಧಾಮ
(2) ಪನ್ನಾ ವನ್ಯಜೀವಿ ಧಾಮ
(3) ವೀರಾಂಗನಾ ದುರ್ಗಾವತಿ ವನ್ಯಜೀವಿ ಧಾಮ
(4) ರಾತಾಪಾನಿ ವನ್ಯಜೀವಿ ಧಾಮ

64. 'ನೆಟ್‌ವರ್ಕ್ ರೆಡಿನೆಸ್ ಇಂಡೆಕ್ಸ್'ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ತಪ್ಪಾಗಿದೆ/ತಪ್ಪಾಗಿವೆ?

(a) ನೆಟ್‌ವರ್ಕ್ ರೆಡಿನೆಸ್ ಇಂಡೆಕ್ಸ್-2024 ರಲ್ಲಿ ಭಾರತವು 49ನೇ ಸ್ಥಾನ ಪಡೆದಿದೆ

(b) ಇದನ್ನು ಯುನೆಸ್ಕೊ ಪ್ರಕಟಿಸುತ್ತದೆ

(c) 2023ರಲ್ಲಿ ಭಾರತವು 60ನೇ ಸ್ಥಾನದಲ್ಲಿತ್ತು

ಕೋಡುಗಳು:

(1) a ಮಾತ್ರತಪ್ಪಾಗಿದೆ
(2) b ಮಾತ್ರ ತಪ್ಪಾಗಿದೆ
(3) c ಮಾತ್ರ ತಪ್ಪಾಗಿದೆ
(4) a ಮತ್ತು c ತಪ್ಪಾಗಿದೆ

65. ಸಬಲ್ 20 ಲಾಜಿಸ್ಟಿಕ್ಸ್ ಡ್ರೋನ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

(a) ಡಿಸೆಂಬರ್ 2024 ರಲ್ಲಿ ಭಾರತೀಯ ನೌಕಾಪಡೆಯು ಅದನ್ನು ಯಶಸ್ವಿಯಾಗಿ ಸೇರ್ಪಡೆಗೊಳಿಸಿತು

(b) ಇದನ್ನು ಎನ್‌ಡ್ಯುರ್ ಏರ್ ಸಿಸ್ಟಮ್ಸ್ ಅಭಿವೃದ್ಧಿ ಪಡಿಸಿತು

(c) ಇದನ್ನು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾನ್ಪುರದಲ್ಲಿ ಇನ್‌ಕ್ಯುಬೇಟ್ ಮಾಡಲಾಗಿತ್ತು

(d) ಇದು ವೇರಿಯೇಬಲ್ ಪಿಚ್ ತಂತ್ರಜ್ಞಾನ ಆಧಾರಿತ ಎಲೆಕ್ಟ್ರಿಕ್ ಮಾನವರಹಿತ ಹೆಲಿಕ್ಯಾಪ್ಟರ್ ಆಗಿದೆ.

ಕೋಡುಗಳು:

(1) b ಮತ್ತು c ಸರಿಯಾಗಿವೆ
(2) a ಮತ್ತು d ಸರಿಯಾಗಿವೆ
(3) d ಸರಿಯಾಗಿದೆ
(4) a, b, c ಮತ್ತು d ಸರಿಯಾಗಿವೆ

SPACE FOR ROUGH WORK

www.shikarat.com

66. ಆಹಾರ ಮತ್ತು ಕೃಷಿ ಸಂಸ್ಥೆಯು ಬಿಡುಗಡೆ ಮಾಡಿರುವ 'ಸ್ಟೇಟ್ ಆಫ್ ಫುಡ್ ಆ್ಯಂಡ್ ಅಗ್ರಿಕಲ್ಚರ್ 2024' ವರದಿಯಂತೆ ಅತೀ ಹೆಚ್ಚು ಕೃಷಿ ಆಹಾರ ಗುಪ್ತ ವೆಚ್ಚವನ್ನು ಹೊಂದಿರುವ ರಾಷ್ಟ್ರಗಳು ಕ್ರಮವಾಗಿ ಹೀಗಿವೆ ________

(1) ದಕ್ಷಿಣ ಆಫ್ರಿಕಾ, ಇಂಗ್ಲೆಂಡ್ ಮತ್ತು ಜಪಾನ್

(2) ಚೀನಾ, ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಭಾರತ

(3) ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಭಾರತ

(4) ಚೀನಾ, ಪಾಕಿಸ್ತಾನ ಮತ್ತು ರಷ್ಯಾ

67. ಈ ಕೆಳಗಿನವುಗಳಲ್ಲಿ ಯಾವ ಜೋಡಿ/ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗಿದೆ/ಹೊಂದಾಣಿಕೆಯಾಗಿವೆ?

| ಅಮೆರಿಕಾದ ಅಧ್ಯಕ್ಷರು | ರಾಜಕೀಯ ಪಕ್ಷ |
|---|---|
| (a) ಡೊನಾಲ್ಡ್ ಟ್ರಂಪ್ | ರಿಪಬ್ಲಿಕನ್ |
| (b) ಜೋ ಬೇಡನ್ | ಡೆಮೊಕ್ರಾಟಿಕ್ |
| (c) ಜಾರ್ಜ್ ಎಚ್.ಡಬ್ಲ್ಯೂ ಬುಷ್ | ಡೆಮೊಕ್ರಾಟಿಕ್ |
| (d) ರೊನಾಲ್ಡ್ ರೇಗನ್ | ರಿಪಬ್ಲಿಕನ್ |
| (e) ಜಾರ್ಜ್ ಡಬ್ಲ್ಯೂ ಬುಷ್ | ರಿಪಬ್ಲಿಕನ್ |

ಕೋಡುಗಳು:

(1) c, d ಮತ್ತು e ಮಾತ್ರ (2) e ಮಾತ್ರ

(3) a, b ಮತ್ತು e ಮಾತ್ರ (4) c ಮಾತ್ರ

68. ಈ ಕೆಳಗಿನ ಯಾವ ಪುಸ್ತಕವನ್ನು /ಪುಸ್ತಕಗಳನ್ನು ಗೊ.ರು. ಚನ್ನಬಸಪ್ಪನವರು ರಚಿಸಿಲ್ಲ ?

(a) ಮಹಾದೇವಿ (b) ವಿಚಾರ ವಾಹಿನಿ

(c) ಚೆಲುವಾಂಬಿಕೆ (d) ವಿಶ್ವಮುಖಿ

(e) ವಿಭೂತಿ

ಕೋಡುಗಳು:

(1) b, d ಮತ್ತು e ಮಾತ್ರ (2) a ಮತ್ತು e ಮಾತ್ರ

(3) b ಮತ್ತು d ಮಾತ್ರ (4) c ಮಾತ್ರ

69. ಈ ಕೆಳಗಿನ ಯಾವ ಜೋಡಿ/ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗಿದೆ/ಹೊಂದಾಣಿಕೆಯಾಗಿವೆ?

| ರಾಜ್ಯ | ರಾಜ್ಯಪಾಲರು |
|---|---|
| (a) ಉತ್ತರ ಪ್ರದೇಶ | ಶ್ರೀಮತಿ ಆನಂದಿಬೆನ್ ಪಟೇಲ್ |
| (b) ಮಹಾರಾಷ್ಟ್ರ | ಶ್ರೀ ಸಿ.ಪಿ. ರಾಧಾಕೃಷ್ಣನ್ |
| (c) ಹರ್ಯಾಣಾ | ಶ್ರೀ ಬಂಡಾರು ದತ್ತಾತ್ರೇಯ |
| (d) ಪಶ್ಚಿಮ ಬಂಗಾಳ | ಶ್ರೀ ಆರ್.ಎನ್. ರವಿ |

ಕೋಡುಗಳು:

(1) d ಮಾತ್ರ (2) c ಮತ್ತು d ಮಾತ್ರ

(3) a, b ಮತ್ತು c ಮಾತ್ರ (4) a, b, c ಮತ್ತು d

SPACE FOR ROUGH WORK

www.shikarat.com

70. 70ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ 'ರಾಷ್ಟ್ರೀಯ, ಸಾಮಾಜಿಕ ಮತ್ತು ಪರಿಸರ ಮೌಲ್ಯಗಳನ್ನು ಉತ್ತೇಜಿಸುವ ಅತ್ಯುತ್ತಮ ಚಲನಚಿತ್ರ' ವಿಭಾಗದಲ್ಲಿ ಪ್ರಶಸ್ತಿಯನ್ನು ಪಡೆದ ಚಲನಚಿತ್ರವನ್ನು ಹೆಸರಿಸಿರಿ.

(1) ಕಚ್ ಎಕ್ಸ್‌ಪ್ರೆಸ್
(2) ಉಂಚಾಯಿ
(3) ಕಾಂತಾರಾ
(4) ಕೆಜಿಎಫ್ : ಚಾಪ್ಟರ್ 2

71. ಕೆಳಗಿನ ಜೋಡಿಗಳಲ್ಲಿ ಯಾವುವು ಸರಿಯಾದ ಹೊಂದಾಣಿಕೆಯಾಗಿವೆ?

(a) ಮಿಥಿಕ್ ಸೊಸೈಟಿ - 1909
(b) ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ - 1914
(c) ಕನ್ನಡ ಸಾಹಿತ್ಯ ಪರಿಷತ್ - 1916
(d) ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ - 1921

ಸರಿಯಾದ ಉತ್ತರವನ್ನು ಕೆಳಗಿನ ಸಂಕೇತಗಳಿಂದ ಆಯ್ಕೆ ಮಾಡಿ:

(1) a ಮತ್ತು c
(2) b ಮತ್ತು d
(3) c ಮತ್ತು d
(4) a ಮತ್ತು b

72. ಭಾರತದ ಹೊರಗೆ ಕಂಡು ಬರುವ ಈ ಕೆಳಕಂಡ ದೇವಾಲಯ ಮತ್ತು ಅದು ಸಂಬಂಧಿಸಿದ ದೇಶಗಳನ್ನು ಹೊಂದಿಸಿ ಬರೆಯಿರಿ

| ದೇವಾಲಯ | ದೇಶ |
|---|---|
| (a) ಪ್ರೇಹ್ ವಿಹೇರ್ ದೇವಾಲಯ | i. ಶ್ರೀಲಂಕಾ |
| (b) ಪ್ರಂಬನನ್ ದೇವಾಲಯ | ii. ಪಾಕಿಸ್ತಾನ |
| (c) ಕಟಾಸ್ ರಾಜ್ ದೇವಾಲಯ | iii. ಕಾಂಬೋಡಿಯಾ |
| (d) ಮುನ್ನೇಶ್ವರಂ ದೇವಾಲಯ | iv. ಇಂಡೋನೇಶ್ಯಾ |

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ:

(1) a - ii, b-i, c-iii, d-iv
(2) a - iii, b-iv, c-ii, d-i
(3) a - ii, b-iv, c-iii, d-i
(4) a - iii, b-iv, c-i, d-ii

73. ಭಾರತ ದೇಶವು ಲೀಥಿಯಂ ಅನ್ವೇಷಣೆಗೆ ಸಂಬಂಧಿಸಿದಂತೆ 'ಲೀಥಿಯಂ ತ್ರಿಕೋನ'ದ ಭಾಗವಾಗಿರುವ ಒಂದು ದೇಶದೊಂದಿಗೆ ಒಪ್ಪಂದ (MoU)ಕ್ಕೆ ಸಹಿ ಹಾಕಿದೆ. ಇದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ದೇಶಗಳು 'ಲೀಥಿಯಂ ತ್ರಿಕೋನ'ದ ಭಾಗವಾಗಿವೆ?

(a) ಅರ್ಜೆಂಟಿನಾ
(b) ಚಿಲಿ
(c) ಬೊಲಿವಿಯಾ
(d) ಪರುಗ್ವೆ

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ:

(1) a, b ಮತ್ತು d ಸರಿಯಾಗಿವೆ
(2) a, b ಮತ್ತು c ಸರಿಯಾಗಿವೆ
(3) b, c ಮತ್ತು d ಸರಿಯಾಗಿವೆ
(4) a, b, c ಮತ್ತು d ಸರಿಯಾಗಿವೆ

SPACE FOR ROUGH WORK

www.shikarat.com

74. ತಾಮ್ರ ಶಿಲಾಯುಗದ ನೆಲೆಗಳು ಮತ್ತು ಅದರ ಸ್ಥಳಕ್ಕೆ ಸಂಬಂಧಿಸಿದಂತೆ, ಈ ಕೆಳಗಿನವುಗಳನ್ನು ಪರಿಗಣಿಸಿ:

(a) ಕಾಯಥಾ : ಮಹಾರಾಷ್ಟ್ರ

(b) ಗಿಲುಂದ್ :ರಾಜಸ್ಥಾನ

(c) ನಾಗ್ಡಾ : ಮಧ್ಯಪ್ರದೇಶ

ಈ ಮೇಲಿನ ಯಾವ ಜೋಡಿ/ಜೋಡಿಗಳು ಸರಿಯಾಗಿದೆ/ಸರಿಯಾಗಿವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಎಲ್ಲಾ ಮೂರು
(4) ಯಾವುದು ಅಲ್ಲ

75. ಶಾತವಾಹನ ಅರಸರು ಹೊಂದಿರುತ್ತಿದ್ದ ಈ ಕೆಳಗಿನ ಬಿರುದುಗಳನ್ನು ಪರಿಗಣಿಸಿರಿ:

(a) ರಾಜ – ಗೌತಮಿ – ಪುತ – ಸಿರಿ – ಶತಕನಿ

(b) ರಾಜ – ವಸಿಷ್ಠಿ – ಪುತ – ಸಿರಿ – ಪುಲುಮಯಿ

(c) ರಾಜ – ಮಾದರಿ – ಪುತ – ಶಕಸೇನ

ಮೇಲಿನ ಎಷ್ಟು ಬಿರುದು/ಬಿರುದುಗಳು ವೈದಿಕ ಋಷಿಗಳೊಂದಿಗೆ ಸಂಪರ್ಕವನ್ನು ಸೂಚಿಸುತ್ತದೆ/ಸೂಚಿಸುತ್ತವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಎಲ್ಲಾ ಮೂರು
(4) ಯಾವುದು ಅಲ್ಲ

76. ಅಶೋಕನ ಶಾಸನಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ:

(a) ಗಿರ್ನಾರ್ ಶಾಸನವು ಅಶೋಕನ ಆಳ್ವಿಕೆಯಲ್ಲಿ ಸುದರ್ಶನ ಸರೋವರವನ್ನು ಪೂರ್ಣಗೊಳಿಸಲಾಯಿತು ಎಂದು ದಾಖಲಿಸುತ್ತದೆ

(b) ಅಶೋಕನ ವೈಯಕ್ತಿಕ ಹೆಸರನ್ನು ಹೊಂದಿರುವ ಕಿರು ಶಿಲಾಶಾಸನ ಮೊದಲು ಮಸ್ಕಿಯಲ್ಲಿ ನಂತರ ಉದೇಗೋಳಂ ಮತ್ತು ನಿಟ್ಟೂರಿನಲ್ಲಿ ದೊರೆತಿವೆ.

(c) ಮನ್ಸೆಹ್ರಾ ಮತ್ತು ಶಹಬಾಜ್‌ಗರ್ಹಿ ಶಾಸನಗಳು ಬ್ರಾಹ್ಮಿ ಲಿಪಿಯಲ್ಲಿವೆ.

ಈ ಮೇಲಿನ ಎಷ್ಟು ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಎಲ್ಲಾ ಮೂರು
(4) ಯಾವುದು ಅಲ್ಲ

SPACE FOR ROUGH WORK

www.shikarat.com

77. ಆಂಗ್ಲೋ-ಮೈಸೂರು ಯುದ್ಧ ಹಾಗೂ ಗವರ್ನರ್ ಜನರಲ್‌ಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳನ್ನು ಪರಿಗಣಿಸಿ:

(a) ಒಂದನೇ ಆಂಗ್ಲೋ-ಮೈಸೂರು ಯುದ್ಧ : ವಾರನ್ ಹೇಸ್ಟಿಂಗ್ಸ್

(b) ಎರಡನೇ ಆಂಗ್ಲೋ-ಮೈಸೂರು ಯುದ್ಧ : ಕಾರ್ನ್‌ವಾಲಿಸ್

(c) ಮೂರನೇ ಆಂಗ್ಲೋ-ಮೈಸೂರು ಯುದ್ಧ : ಸರ್ ಜಾನ್ ಶೋರ್

(d) ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧ : ಲಾರ್ಡ್ ವೆಲ್ಲೆಸ್ಲಿ

ಈ ಮೇಲಿನ ಎಷ್ಟು ಜೋಡಿ/ಜೋಡಿಗಳು ಸರಿಯಾಗಿ ಹೊಂದಿಕೆಯಾಗಿದೆ/ಹೊಂದಿಕೆಯಾಗಿವೆ?

(1) ಒಂದು ಮಾತ್ರ

(2) ಎರಡು ಮಾತ್ರ

(3) ಮೂರು ಮಾತ್ರ

(4) ಎಲ್ಲಾ ನಾಲ್ಕು

78. ಚೋಳರ ದೇವಾಲಯಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳನ್ನು ಪರಿಗಣಿಸಿರಿ:

(a) ಐರಾವತೇಶ್ವರ ದೇವಾಲಯ, ದಾರಾಸುರಂ : ರಾಜರಾಜ ಚೋಳ-II

(b) ಬೃಹದೀಶ್ವರ ದೇವಾಲಯ, ಗಂಗೈಕೊಂಡ ಚೋಳಪುರಂ : ರಾಜರಾಜ ಚೋಳ-I

(c) ಬೃಹದೀಶ್ವರ ದೇವಾಲಯ, ತಂಜಾವೂರು : ರಾಜೇಂದ್ರ ಚೋಳ-I

ಮೇಲಿನವುಗಳಲ್ಲಿ ಎಷ್ಟು ದೇವಾಲಯ/ದೇವಾಲಯಗಳು ಸರಿಯಾಗಿ ಹೊಂದಿಕೆಯಾಗಿದೆ/ಹೊಂದಿಕೆಯಾಗಿವೆ?

(1) ಒಂದು ಮಾತ್ರ
(2) ಎರಡು ಮಾತ್ರ

(3) ಎಲ್ಲಾ ಮೂರು
(4) ಮೇಲಿನ ಯಾವುದು ಅಲ್ಲ

79. ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ:

(a) ಬಾಬರ್ : ತುಜುಕ್-ಇ-ಬಾಬರಿ

(b) ಅಕ್ಬರ್ : ಐನ್-ಇ-ಅಕ್ಬರಿ

(c) ಜಹಾಂಗೀರ್ : ತುಜುಕ್-ಇ-ಜಹಾಂಗೀರಿ

(d) ಷಹಜಹಾನ್ : ಷಹಜಹಾನ್ ನಾಮಾ

ಮೇಲಿನವುಗಳಲ್ಲಿ ಎಷ್ಟು ಮೊಘಲ್ ರಾಜರ ಆತ್ಮಚರಿತ್ರೆಯಾಗಿದೆ/ಆತ್ಮ ಚರಿತ್ರೆಗಳಾಗಿವೆ?

(1) ಒಂದು ಮಾತ್ರ
(2) ಎರಡು ಮಾತ್ರ

(3) ಮೂರು ಮಾತ್ರ
(4) ಎಲ್ಲಾ ನಾಲ್ಕು

SPACE FOR ROUGH WORK

www.shikarat.com

80. ಶಿವಾಜಿಯ ಅಷ್ಟಪ್ರಧಾನಕ್ಕೆ ಸಂಬಂಧಿಸಿದಂತೆ, ಈ ಕೆಳಗಿನವುಗಳನ್ನು ಪರಿಗಣಿಸಿರಿ:

(a) ಸರ್-ಇ-ನೌಬತ್ : ಸೇನಾಧಿಪತಿ

(b) ಪಂಡಿತ ರಾವ್ : ಧಾರ್ಮಿಕ ಮುಖ್ಯಸ್ಥ

(c) ಸುರ್ನವಿಸ್ : ವಿದೇಶಾಂಗ ಸಚಿವ

(d) ಅಮಾತ್ಯ : ಹಣಕಾಸು ಸಚಿವ

ಈ ಮೇಲಿನ ಎಷ್ಟು ಜೋಡಿ/ಜೋಡಿಗಳು ಸರಿಯಾಗಿ ಹೊಂದಿಕೆಯಾಗಿದೆ/ಹೊಂದಿಕೆಯಾಗಿವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಮೂರು ಮಾತ್ರ
(4) ಎಲ್ಲಾ ನಾಲ್ಕು

81. ಭಾರತದ ಸುಧಾರಣಾ ಚಳುವಳಿಗೆ ಸಂಬಂಧಿಸಿದಂತೆ, ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

(a) ಬ್ರಹ್ಮ ಸಮಾಜದಿಂದ ಪ್ರೇರಿತವಾದ ವೇದ ಸಮಾಜವನ್ನು 1864 ರಲ್ಲಿ ಮದ್ರಾಸಿನಲ್ಲಿ ಸ್ಥಾಪಿಸಲಾಯಿತು

(b) ಮೊಹಮ್ಮದ್ ಅಲಿ ಜಿನ್ನಾರ ನೇತೃತ್ವದಲ್ಲಿ ಅಲಿಘರ್ ಚಳುವಳಿ ನಡೆಯಿತು

(c) ಸಿಂಗ ಸಭಾ ಚಳುವಳಿಯನ್ನು ಅಮೃತಸರ ಮತ್ತು ಲಾಹೋರ್‌ನಲ್ಲಿ ಸ್ಥಾಪಿಸಲಾಯಿತು

ಈ ಮೇಲಿನ ಎಷ್ಟು ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಎಲ್ಲಾ ಮೂರು
(4) ಯಾವುದು ಅಲ್ಲ

82. ಬ್ರಿಟೀಷರ ವಿರುದ್ಧ ರಾಷ್ಟ್ರೀಯ ಹೋರಾಟಕ್ಕೆ ಕನ್ನಡಿಗರನ್ನು ಸಜ್ಜುಗೊಳಿಸಲು ಎನ್.ಎಸ್. ಹರ್ಡೀಕರ್‌ರವರು ಆರಂಭಿಸಿದ ಸಂಸ್ಥೆಗಳು ಯಾವುವು?

(a) ಆರ್ಯ ಬಾಲ ಸಭಾ

(b) ಖಾದಿ ಸಂಘ

(c) ಹಿಂದುಸ್ತಾನಿ ಸೇವಾದಳ

ಸರಿಯಾದ ಉತ್ತರವನ್ನು ಕೆಳಗಿನ ಸಂಕೇತಗಳ ಮೂಲಕ ಆಯ್ಕೆ ಮಾಡಿ

(1) a ಮತ್ತು b ಮಾತ್ರ
(2) b ಮತ್ತು c ಮಾತ್ರ
(3) a ಮತ್ತು c ಮಾತ್ರ
(4) a, b ಮತ್ತು c

83. ಕರ್ನಾಟಕದಲ್ಲಿ ದೊರೆತಿರುವ ಅಶೋಕನ ಪ್ರಾರಂಭಿಕ ಶಾಸನಗಳು ಕೆಳಗಿನ ಯಾವ ಪ್ರಕಾರಕ್ಕೆ ಸೇರಿವೆ?

(a) ಮುಖ್ಯ ಬಂಡೆ ಶಾಸನಗಳು
(b) ಕಿರು ಬಂಡೆ ಶಾಸನಗಳು
(c) ಸ್ತಂಭ ಶಾಸನಗಳು
(d) ಗುಹಾ ಶಾಸನಗಳು

ಸರಿಯಾದ ಉತ್ತರವನ್ನು ಕೆಳಗಿನ ಸಂಕೇತಗಳ ಮೂಲಕ ಆಯ್ಕೆ ಮಾಡಿ

(1) a ಮಾತ್ರ
(2) b ಮಾತ್ರ
(3) a ಮತ್ತು c
(4) c ಮತ್ತು d

SPACE FOR ROUGH WORK

www.shikarat.com

84. ಏಪ್ರಿಲ್ 6, 1930 ರಂದು ಕೆಳಗಿನ ಯಾವ ಸ್ಥಳದಲ್ಲಿ ಗಂಗಾಧರ ರಾವ್ ದೇಶಪಾಂಡೆಯವರು ಉಪ್ಪನ್ನು ಹರಾಜು ಹಾಕುವುದರ ಮೂಲಕ ಬ್ರಿಟೀಷರ ಕಾನೂನನ್ನು ಉಲ್ಲಂಘಿಸಿದ್ದರು?

(1) ಬೆಳಗಾವಿ (2) ಅಂಕೋಲಾ

(3) ಧಾರವಾಡ (4) ಮಂಗಳೂರು

85. ಒಂದನೇಯ ಅಹಮದ್ ಬಹಮನ್ ಷಾಗೆ ಸಂಬಂಧಿಸಿದ ಹೇಳಿಕೆಗಳನ್ನು ಪರಿಗಣಿಸಿ:

(a) ಬಹಮನಿಯ ರಾಜಧಾನಿಯನ್ನು ಕಲ್ಬುರ್ಗಿಯಿಂದ ಬೀದರ್‌ಗೆ ವರ್ಗಾಯಿಸಿದನು

(b) ಸೋಲಾಕಂಬ್ ಮಸೀದಿಯನ್ನು ಕಲ್ಬುರ್ಗಿಯಲ್ಲಿ ನಿರ್ಮಿಸಿದನು

(c) ಸಾಮ್ರಾಜ್ಯದ ಜನರು ಈತನನ್ನು ವಲಿ (ಸಂತ) ಎಂದೇ ಕರೆಯುತ್ತಿದ್ದರು

(d) ಬೀದರ್‌ನ ಅಷ್ಟೂರಿನಲ್ಲಿ ಈ ಸುಲ್ತಾನನ ಸಮಾಧಿ ನಿರ್ಮಿಸಲಾಗಿದೆ

ಸರಿಯಾದ ಉತ್ತರವನ್ನು ಕೆಳಗಿನ ಸಂಕೇತಗಳ ಮೂಲಕ ಆಯ್ಕೆ ಮಾಡಿ

(1) a, b ಮತ್ತು c (2) a, c ಮತ್ತು d

(3) b, c ಮತ್ತು d (4) a ಮತ್ತು c

86. ಕರ್ನಾಟಕದ ಇತಿಹಾಸ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಕನ್ನಡಿಗರಲ್ಲಿ ಅಭಿಮಾನ ಮೂಡಿಸಲು ಸ್ಥಾಪನೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಥಮ ಅಧ್ಯಕ್ಷರು ಯಾರು?

(1) ಫ.ಗು. ಹಳಕಟ್ಟಿ (2) ಶಿವನಪ್ಪ ದೇಸಾಯಿ

(3) ರೊದ್ದ ಶ್ರೀನಿವಾಸರಾಯರು (4) ಕೈಕಿಣಿ ಶ್ಯಾಮರಾವ್

87. ಕೆಳಗಿನ ಯಾವ ಬಿರುದು ಹೊಯ್ಸಳ ರಾಜ 2ನೇ ವೀರ ಬಲ್ಲಾಳನಿಗೆ ಸಂಬಂಧಿಸಿರುವುದಿಲ್ಲ ?

(1) ಹೊಯ್ಸಳ ಚಕ್ರವರ್ತಿ (2) ದಕ್ಷಿಣ ಚಕ್ರವರ್ತಿ

(3) ಚೋಳ ಪ್ರತಿಷ್ಠಾಪನಾಚಾರ್ಯ (4) ಭೂಲೋಕಮಲ್ಲ

88. ಪಟ್ಟಿ I ನ್ನು ಪಟ್ಟಿ II ರ ಜೊತೆ ಹೊಂದಿಸಿ:

| ಪಟ್ಟಿ I (ಸಸ್ಯ ಅಂಗಾಂಶ) | ಪಟ್ಟಿ II (ಕಾರ್ಯ) |
|---|---|
| (a) ಪ್ಯಾರೆಂಕೈಮಾ | i. ನೀರಿನ ಸಾಗಾಣಿಕೆ |
| (b) ಕೋಲೆಂಕೈಮಾ | ii. ಆಹಾರ ಸಂಗ್ರಹಣೆ |
| (c) ಕ್ಸೈಲಂ | iii. ಆಹಾರ ಸಾಗಾಣಿಕೆ |
| (d) ಫ್ಲೋಯಂ | iv. ಯಾಂತ್ರಿಕ ಆಧಾರ ನೀಡುವುದು |

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ.

(1) a - ii, b-iv, c-i, d-iii (2) a - ii, b-i, c-iv, d-iii

(3) a - i, b-ii, c-iv, d-iii (4) a - iv, b-ii, c-iii, d-i

SPACE FOR ROUGH WORK

www.shikarat.com

89. ಭಾರತ ಸಂವಿಧಾನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಯನ್ನು ಖಾತ್ರಿಗೊಳಿಸುವುದು

(1) ಲೋಕಸಭೆಯಲ್ಲಿ ಮಾತ್ರ

(2) ರಾಜ್ಯ ಸಭೆಯಲ್ಲಿ ಮಾತ್ರ

(3) ವಿಧಾನಸಭೆಯಲ್ಲಿ ಮಾತ್ರ

(4) ಲೋಕಸಭೆ ಮತ್ತು ವಿಧಾನ ಸಭೆಯಲ್ಲಿ ಮಾತ್ರ

90. ಭಾರತದ ಅಟಾರ್ನಿ ಜನರಲ್ಲರಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾದುದಲ್ಲ?

(1) ಅವರು ಭಾರತದ ಭೂ ಪ್ರದೇಶದೊಳಗಿನ ಎಲ್ಲಾ ನ್ಯಾಯಾಲಯಗಳಲ್ಲಿ ಹಾಜರಾಗುವ ಹಕ್ಕನ್ನು ಹೊಂದಿದ್ದಾರೆ

(2) ಅವರ ಅಧಿಕಾರಾವಧಿಯನ್ನು ಭಾರತ ಸಂವಿಧಾನದಿಂದ ನಿಗದಿಪಡಿಸಲಾಗಿಲ್ಲ

(3) ಅವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳುವ ಅರ್ಹತೆ ಹೊಂದಿರುವ ವ್ಯಕ್ತಿಯಾಗಿರಬೇಕು

(4) ಅವರ ಸಂಭಾವನೆಯನ್ನು ಭಾರತದ ಸಂಸತ್ತಿನಿಂದ ನಿರ್ಧರಿಸಲಾಗಿದೆ

91. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

(a) ಭಾರತ ಸಂವಿಧಾನದ 371-A ವಿಧಿಯು ನಾಗಲ್ಯಾಂಡ್‌ನ ವಿಶೇಷ ಉಪಬಂಧಗಳನ್ನು ಒಳಗೊಂಡಿದೆ

(b) ಭಾರತ ಸಂವಿಧಾನದ 371-F ವಿಧಿಯು ಸಿಕ್ಕಿಂನ ವಿಶೇಷ ಉಪಬಂಧಗಳನ್ನು ಒಳಗೊಂಡಿದೆ

(c) 371-J ವಿಧಿಯನ್ನು ನಮ್ಮ ಸಂವಿಧಾನಕ್ಕೆ 98 ನೇ ಸಂವಿಧಾನ ತಿದ್ದುಪಡಿ ಕಾಯ್ದೆ , 2012 ರ ಮೂಲಕ ಸೇರ್ಪಡೆ ಮಾಡಲಾಯಿತು

(d) ಭಾರತ ಸಂವಿಧಾನದ 371-E ವಿಧಿಯು ಆಂಧ್ರ ಪ್ರದೇಶ ರಾಜ್ಯದಲ್ಲಿ ಒಂದು ಕೇಂದ್ರೀಯ ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸುವ ಅಧಿಕಾರವನ್ನು ರಾಷ್ಟ್ರಾಧ್ಯಕ್ಷರಿಗೆ ನೀಡಿದೆ

ಮೇಲೆ ನೀಡಲಾಗಿರುವ ಹೇಳಿಕೆಗಳಲ್ಲಿ ಯಾವುದು/ವು ಸರಿ?

(1) a ಮಾತ್ರ

(2) b ಮಾತ್ರ

(3) a, b ಮತ್ತು c ಮಾತ್ರ

(4) a, b, c ಮತ್ತು d

92. 73 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯಲ್ಲಿ ಕೆಳಗಿನ ಉಪಬಂಧಗಳಲ್ಲಿ ಯಾವುದನ್ನು ರಾಜ್ಯವೊಂದರ ಶಾಸಕಾಂಗದ ಇಚ್ಛೆಗೆ ಬಿಡಲಾಗಿದೆ?

(1) ಎಲ್ಲಾ ಹಂತಗಳ ಪಂಚಾಯಿತಿಗಳ ಸದಸ್ಯರನ್ನು ಪ್ರತ್ಯಕ್ಷ ಚುನಾವಣೆಗಳಿಂದ ತುಂಬುವುದು

(2) ಪಂಚಾಯಿತಿಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದು

(3) ಪಂಚಾಯಿತಿಗಳಲ್ಲಿ ಮಹಿಳೆಯರಿಗೆ 1/3 ರಷ್ಟು ಸ್ಥಾನಗಳ ವರೆಗೆ ಮೀಸಲಾತಿ ನೀಡುವುದು

(4) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಅವುಗಳ ಜನಸಂಖ್ಯಾ ಅನುಪಾತದ ಮೇರೆಗೆ ಮೀಸಲಾತಿ ನೀಡುವುದು



www.shikarat.com

93. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಹೇಳಿಕೆಯಾಗಿದೆ?

356 ನೇ ವಿಧಿಯ ಅಡಿಯಲ್ಲಿ ರಾಜ್ಯವೊಂದರಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಘೋಷಣೆಯು ಒಂದು ವರ್ಷದಾಚೆಗೆ ಮುಂದುವರೆಯಬೇಕಾದರೆ,

(1) ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ಇದೆ ಎಂದು ರಾಷ್ಟ್ರಾಧ್ಯಕ್ಷರು ತೃಪ್ತಿ ಪಟ್ಟುಕೊಳ್ಳಬೇಕು

(2) ವಿಧಾನ ಸಭೆಗೆ ಚುನಾವಣೆಗಳನ್ನು ನಡೆಸುವುದು ಕಠಿಣ ಎಂದು ಚುನಾವಣಾ ಆಯೋಗ ಪ್ರಮಾಣೀಕರಿಸಬೇಕು

(3) ಕಾನೂನು ಮತ್ತು ಸುವ್ಯವಸ್ಥೆ ನಿಯಂತ್ರಣದಲ್ಲಿಲ್ಲ ಎಂದು ರಾಜ್ಯದ ರಾಜ್ಯಪಾಲರು ಪ್ರಮಾಣೀಕರಿಸಬೇಕು

(4) ರಾಜ್ಯದಲ್ಲಿ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ ಎಂದು ರಾಜ್ಯದ ಉಚ್ಚ ನ್ಯಾಯಾಲಯ ಪ್ರಮಾಣೀಕರಿಸಬೇಕು

94. ಈ ಕೆಳಗಿನ ಯಾವ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷರು ಪ್ರಕರಣವನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಉಲ್ಲೇಖಿಸುವುದರ ಮೂಲಕ ಕೇಂದ್ರ ಲೋಕ ಸೇವಾ ಆಯೋಗದ ಸದಸ್ಯನೊಬ್ಬನನ್ನು ಪದಚ್ಯುತಿಗೊಳಿಸಬಹುದು?

(a) ಆತನು ದಿವಾಳಿಯಾಗಿದ್ದಾನೆಂದು ತೀರ್ಮಾನಿಸಲ್ಪಟ್ಟರೆ

(b) ತನ್ನ ಅಧಿಕಾರವಧಿಯಲ್ಲಿ ವೇತನ ಪಡೆಯುವ ಬೇರೆ ಹುದ್ದೆಯಲ್ಲಿದ್ದರೆ

(c) ಆತನು ರಾಷ್ಟ್ರಾಧ್ಯಕ್ಷರ ಅಭಿಪ್ರಾಯದಲ್ಲಿ ಮಾನಸಿಕವಾಗಿ ಅಥವಾ ಶಾರೀರಿಕವಾಗಿ ಅಸಮರ್ಥನಾಗಿದ್ದರೆ

(d) ಅನುಚಿತ ವರ್ತನೆಯ ಆಧಾರದ ಮೇಲೆ

ಕೋಡುಗಳು :

(1) a ಮಾತ್ರ
(2) b ಮತ್ತು c
(3) d ಮಾತ್ರ
(4) a, b ಮತ್ತು c

95. ಸಂವಿಧಾನ ರಚನಾ ಸಭೆಯ ಸದಸ್ಯರು

(1) ಗವರ್ನರ್ ಜನರಲ್ಲರಿಂದ ನಾಮನಿರ್ದೇಶಿತರಾಗಿದ್ದರು

(2) ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನಿಂದ ನಾಮನಿರ್ದೇಶಿತರಾಗಿದ್ದರು

(3) ವಿವಿಧ ಪ್ರಾಂತೀಯ ಶಾಸನ ಸಭೆಗಳಿಂದ ಚುನಾಯಿಸಲ್ಪಟ್ಟಿದ್ದರು ಮತ್ತು ರಾಜಸಂಸ್ಥಾನಗಳಿಂದ ನಾಮನಿರ್ದೇಶಿತರಾಗಿದ್ದರು

(4) ಜನರಿಂದ ಪ್ರತ್ಯಕ್ಷವಾಗಿ ಚುನಾಯಿಸಲ್ಪಟ್ಟಿದ್ದರು

96. ಜಠರದಲ್ಲಿ ಹುಣ್ಣು ಉಂಟುಮಾಡುವ ಸೂಕ್ಷ್ಮಾಣು ಜೀವಿ ಯಾವುದು?

(1) ವಿಬ್ರಿಯೋ ಕಾಲರೆ

(2) ಸ್ಟ್ರೆಪ್ಟೋಕಾಕಸ್ ನ್ಯೂಮೋನಿಯೆ

(3) ಹೆಲಿಕೋಬ್ಯಾಕ್ಟರ್ ಪೈಲೋರಿ

(4) ಯಿಸ್ಚರೀಷಿಯಾ ಕೋಲಿ

SPACE FOR ROUGH WORK

www.shikarat.com

97. ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

(a) ಕೇಂದ್ರೀಯ ಸಂಖ್ಯಾ ಶಾಸ್ತ್ರೀಯ ಸಂಸ್ಥೆಯು (CSO) 1951 ರಲ್ಲಿ ಸ್ಥಾಪಿತವಾಯಿತು

(b) ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ (NSSO)ಯು ಹಣಕಾಸು ಸಚಿವಾಲಯದ ಅಡಿಯಲ್ಲಿ ಬರುತ್ತದೆ

(c) ರಾಷ್ಟ್ರೀಯ ಅಂಕಿ-ಅಂಶಗಳ ಕಛೇರಿ 2019 ರಲ್ಲಿ ಕೇಂದ್ರೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆ ಮತ್ತು ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆಗಳ ವಿಲೀನದೊಂದಿಗೆ ಅಸ್ತಿತ್ವಕ್ಕೆ ಬರುತ್ತದೆ

ಕೆಳಗಿನ ಕೋಡುಗಳನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) a ಮಾತ್ರ

(2) a ಮತ್ತು b ಮಾತ್ರ

(3) b ಮತ್ತು c ಮಾತ್ರ

(4) a ಮತ್ತು c ಮಾತ್ರ

98. ಸರಿಯಾದ ಜೋಡಿಯನ್ನು/ಜೋಡಿಗಳನ್ನು ಗುರುತಿಸಿ.

| ಯೋಜನೆ | | ಅನುಷ್ಠಾನ ವರ್ಷ |
|---|---|---|
| (a) ಉದ್ಯೋಗ ಖಾತರಿ ಯೋಜನೆ | - | 2004 |
| (b) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ | - | 1999 |
| (c) ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆ | - | 1993 |
| (d) ಪ್ರಧಾನ ಮಂತ್ರಿ ವಸತಿ ಯೋಜನೆ | - | 2016-17 |

ಕೋಡುಗಳು:

(1) b ಮತ್ತು d ಮಾತ್ರ

(2) b ಮತ್ತು c ಮಾತ್ರ

(3) b ಮಾತ್ರ

(4) a ಮತ್ತು b ಮಾತ್ರ



www.shikarat.com

99. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

ಹೇಳಿಕೆ I: ಹಣದುಬ್ಬರ ಸಾಲ ತೆಗೆದುಕೊಳ್ಳುವವರಿಗೆ ಅನುಕೂಲಕರವಾಗಿದ್ದು, ಸಾಲ ನೀಡುವವರಿಗೆ ಅನಾನುಕೂಲಕರವಾಗಿದೆ

ಹೇಳಿಕೆ II: ಹಣದುಬ್ಬರದ ಸಂದರ್ಭದಲ್ಲಿ ಹಣದ ಮೌಲ್ಯವು ಕಡಿಮೆಯಾಗುತ್ತದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನ ಯಾವುದು ಸರಿಯಾಗಿದೆ?

(1) ಎರಡೂ ಹೇಳಿಕೆಗಳು ಸರಿಯಾಗಿದ್ದು, II ನೇ ಹೇಳಿಕೆ I ನೇ ಹೇಳಿಕೆಯನ್ನು ವಿವರಿಸುತ್ತದೆ.

(2) ಎರಡೂ ಹೇಳಿಕೆಗಳು ಸರಿಯಾಗಿದ್ದು, II ನೇ ಹೇಳಿಕೆ I ನೇ ಹೇಳಿಕೆಯನ್ನು ವಿವರಿಸುವುದಿಲ್ಲ

(3) I ನೇ ಹೇಳಿಕೆ ಸರಿಯಾಗಿದೆ ಆದರೆ II ನೇ ಹೇಳಿಕೆ ತಪ್ಪಾಗಿದೆ

(4) I ನೇ ಹೇಳಿಕೆ ತಪ್ಪಾಗಿದೆ ಆದರೆ II ನೇ ಹೇಳಿಕೆ ಸರಿಯಾಗಿದೆ

100. 141 ನೇಯ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಅಧಿವೇಶನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

(a) ಈ ಅಧಿವೇಶನವು ಅಕ್ಟೋಬರ್ 2023ರಲ್ಲಿ ಮುಂಬೈನಲ್ಲಿ ನಡೆಯಿತು

(b) ಭಾರತದಲ್ಲಿ ಮೊದಲ ಬಾರಿಗೆ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಅಧಿವೇಶನವು 1983ರಲ್ಲಿ, ನವದೆಹಲಿಯಲ್ಲಿ ನಡೆದಿತ್ತು.

(c) 2023ರ ಅಧಿವೇಶನದಲ್ಲಿ ಬೇಸ್‌ಬಾಲ್, ಸಾಫ್ಟ್‌ಬಾಲ್, ಕ್ರಿಕೆಟ್, ಫ್ಲಾಗ್ ಫುಟ್‌ಬಾಲ್, ಲ್ಯಾಕ್ರೋಸ್ ಮತ್ತು ಸ್ಕ್ವಾಷ್‌ಗಳನ್ನು ಅಧಿಕೃತವಾಗಿ 2028 ರ ಒಲಿಂಪಿಕ್ಸ್ ಗೇಮ್ಸ್‌ಗೆ ಸೇರಿಸಲಾಗಿದೆ

ಕೆಳಗಿನ ಕೋಡ್ ಬಳಸಿ ಯಾವ ಹೇಳಿಕೆಗಳು ಸರಿಯಾಗಿವೆ ಎಂದು ಗುರುತಿಸಿ:

(1) a ಮಾತ್ರ

(2) a ಮತ್ತು b ಮಾತ್ರ

(3) a ಮತ್ತು c ಮಾತ್ರ

(4) a, b ಮತ್ತು c

www.shikarat.com